# ನಾದನೂಪುರ ವಂಡಾರು
# Nadanoopura Vandaru





ಮುಖ್ಯಸ್ಥರು – ವಂಡಾರು ಗೋವಿಂದ
97418 47278

ಪ್ರಧಾನ ಸಂಪಾದಕರು – ಶುಭಾಶಯ
9482847978

Nadanoopura Yakshothana Trust (NYT) (R.)
Vandaru, Marvi, Vandaru village and Post,
Brahmavara Taluk, Udupi District – 576223
Email : nadanoopuravandaru@gmail.com
Website – https://nyt.1ngo.in/

ಪರಿವಿಡಿ

ಬೋರ್ಡ್ ರೂಮ್
ಸಂಪಾದಕೀಯ
ಯಕ್ಷಗಾನ ಕನ್ನಡದ ಅಸ್ಮಿತೆ – ಡಾ. ದಿನಕರ್ ಪಚ್ಚನಾಡಿ
ಬಲಿಪ ನಾರಾಯಣ ಭಾಗವತ ಮತ್ತು ಅಂಬಾತನಯ ಮುದ್ರಾಡಿಯವರ ಯಕ್ಷ ಕೃತಿಗಳ ಮೇಲೊಂದು ನೋಟ
ತಾಳಮದ್ದಳೆಯಲ್ಲಿ ಅರ್ಥಗಾರಿಕೆಗೆ ಬೇಕಾದ ಅಂಶಗಳು
ಚೆಂಡೆಯ ಮಾಂತ್ರಿಕ – ರಾಮಕೃಷ್ಣ ಮಂದಾರ್ತಿ
ಧೀರ ಕಲೆಯೊಳಗೆ ಕೀರವಾಣಿಯರು– ಯೋಗಾಕ್ಷಿ ಗಣೇಶ್ ತಲಕಳ
ಕಾಡುವ ಪಾತ್ರ– 1 ಸಂಜಯ್ ಕುಮಾರ್ ಶೆಟ್ಟಿ ಗೋಣಿಬೀಡು
2 ಎಳಬೇರು ಶೇಖರ್ ಶೆಟ್ಟಿ

## ಬೋರ್ಡ್ ರೂಂ



ಗೋವಿಂದ ವಂಡಾರು


***ನಮಸ್ಕಾರ ಓದುಗರೇ,***

**ನಾನು ಕಂಡಂತೆ ಯಕ್ಷಗಾನ ಸಮ್ಮೇಳನ:** ಉಡುಪಿಯ ಎಂಜಿಎಂ ಕಾಲೇಜು ಮೈದಾನದಲ್ಲಿ ನಡೆದ ರಾಜ್ಯ ಮಟ್ಟದ ಪ್ರಥಮ ಯಕ್ಷಗಾನ ಸಮ್ಮೇಳನ ಯಶಸ್ವಿಯಾಗಿ ಸಂಪನ್ನಗೊಂಡಿತು ಹಾಗೂ ಮುಖ್ಯವಾಗಿ ಎರಡು ದಿನಗಳ ಕಾಲ ಇಡೀ ಮೈದಾನ ವರ್ಣಮಯವಾಗಿತ್ತು. ಯಕ್ಷಗಾನದ ಕೀರ್ತಿಶೇಷರ ಹೆಸರಿನ ವಿವಿಧ ವೇದಿಕೆಗಳಲ್ಲಿ ಹಲವು ಗೋಷ್ಟಿಗಳು, ಪ್ರದರ್ಶನ, ತಾಳಮದ್ದಳೆ, ಪರಿಕರ ತಯಾರಿಕೆ, ಮಳಿಗೆಗಳು, ಹಳೆಯ ಮಾದರಿಯ ವೇಷಭೂಷಣಗಳ ಪ್ರದರ್ಶನ ಹಾಗೂ ಮಾರಾಟ, ಯಕ್ಷಗಾನ ಕೃತಿಗಳ ಪ್ರದರ್ಶನ ಮಾರಾಟ, ಸಾರ್ವಜನಿಕರಿಗೆ ಯಕ್ಷಗಾನ ವೇಷ ಮಾಡಿಕೊಂಡು ಸಂಭ್ರಮಿಸವ ಅವಕಾಶ, 100ಕ್ಕೂ ಹೆಚ್ಚು ಅಗಲಿದ ಹಿರಿಯ ಯಕ್ಷಚೇತನಗಳ ಪರಿಚಯದೊಂದಿಗೆ ಭಾವಚಿತ್ರ ಪ್ರದರ್ಶನ ಇವೆಲ್ಲವೂ ಕಾರ್ಯಕ್ರಮವನ್ನು ಕಳೆಗಟ್ಟುವಂತೆ ಮಾಡಿದ್ದು ನಿಜ. ವೃತ್ತಿಪರ ಹವ್ಯಾಸಿ ತಂಡಗಳಿಗೆ ಪ್ರದರ್ಶನಕ್ಕೆ ಅವಕಾಶ, ಸಹಕಲೆಗಳಾದ ದೊಡ್ಡಾಟ, ಹೂವಿನಕೋಲು, ತೊಗಲು ಗೊಂಬೆ ಪ್ರದರ್ಶನ, ಹೀಗೆ ಹತ್ತು ಹಲವು ವಿಶೇಷತೆಗಳ ಐತಿಹಾಸಿಕ ಸಂಭ್ರಮಕ್ಕೆ ಈ ಸಮ್ಮೇಳನ ಸಾಕ್ಷಿಯಾಯಿತು. ಅನೇಕರಿಗೆ ಬಡಗುತಿಟ್ಟಿನ ಯಕ್ಷಗಾನದ ಕಸೆ ಸೀರೆ ಹೇಗೆ ತಯಾರಾಗುತ್ತದೆ ಎಂಬುದು ತಿಳಿದಿಲ್ಲ. ಈ ಸಮ್ಮೇಳನದಲ್ಲಿ ಕಸೆ ಸೀರೆ ತಯಾರಿಸುವುದನ್ನು ಕಣ್ಣಾರೆ ನೋಡುವ ಅವಕಾಶ ದೊರಕಿತು. ವಿವಿಧ ಮೇಳಗಳ ಕಲಾವಿದರು ಪರಸ್ಪರ ಎದುರುಗೊಳ್ಳಲು, ವಿಚಾರಗಳನ್ನು ಹಂಚಿಕೊಳ್ಳಲು ಇದೊಂದು ಸಮರ್ಪಕ ಸಂದರ್ಭ ಹಾಗೂ ವೇದಿಕೆಯೂ ಆಯಿತು. ಯಕ್ಷಗಾನ ಕಲೆಯ ಮುಖ್ಯ ಭಾಗವಾಗಿರುವ ಕಲಾವಿದರಿಗೆ ಎರಡು ದಿನಗಳ ವಿವಿಧ ಗೋಷ್ಟಿಗಳಲ್ಲಿ ಭಾಗವಹಿಸಿ ವಿಷಯ ತಿಳಿದುಕೊಳ್ಳಲು ಸಾಧ್ಯವಾಗಲಿಲ್ಲ. ಏಕೆಂದರೆ ಮೇಳಗಳ ತಿರುಗಾಟದ ಸಮಯ ಆಗಿದ್ದರಿಂದ ಅರ್ಧ ಗಂಟೆಯೋ, ಒಂದು ಗಂಟೆಯೋ ಭಾಗವಹಿಸಿ ವಿಶೇಷಗಳತೆಗಳನ್ನು ಕಣ್ತುಂಬಿಕೊಳ್ಳುವಂತಾಯಿತು. ಇದು ಪ್ರತಿ ಕಲಾವಿದನಿಗೆ ಎದುರಾದ ಮಿತಿ ಎಂದೆನ್ನಬಹುದು. ಆದರೆ ದೊಡ್ಡ ಕಾರ್ಯಕ್ರಮದ ಭಾಗವಾದ ಹೆಮ್ಮೆ ಪ್ರತಿಯೊಬ್ಬರದೂ. ಈ ನೆನಪನ್ನು ಸ್ಮರಣೀಯವಾಗಿಸಲೆಂದೇ ಅಕಾಡೆಮಿಯ ವತಿಯಿಂದ ಪ್ರತಿಯೊಬ್ಬ ಕಲಾವಿದನಿಗೂ ಪ್ರಮಾಣ ಪತ್ರವನ್ನು ನೀಡಲಾಗಿದೆ. ಜೊತೆಗೆ ಕಿರು ಲಗೇಜ್ ಬ್ಯಾಗ್, ಹಾಗೂ ಹಾಟ್ ಬಾಕ್ಸ್ ಕೂಡಾ ಅಕಾಡೆಮಿ ವತಿಯಿಂದ ಪ್ರತೀ ಕಲಾವಿದನಿಗೂ ನೀಡಲಾಗಿದೆ. ವಿಶೇಷ ಎಂದರೆ ಕಲಾವಿದರ ಆರೋಗ್ಯದ ಬಗ್ಗೆಯೂ ಕಾಳಜಿ ತೆಗೆದುಕೊಳ್ಳುವ ಕ್ರಮ ಕೈಗೊಂಡಿದ್ದು ಪ್ರಶಂಸನೀಯ. ಸಮ್ಮೇಳನಕ್ಕೆ ಹಾಜರಾದ ಕಲಾವಿದರ ಶ್ರವಣ ಪರೀಕ್ಷೆಯ ವ್ಯವಸ್ಥೆ ಮಾಡಲಾಗಿತ್ತು. ಇದೊಂದು ಅಗತ್ಯವಾದ ಕಾರ್ಯಕ್ರಮ ಏಕೆಂದರೆ, ಪ್ರತಿದಿನ ಮೈಕ್ ನ ಅಧಿಕ ಸದ್ದಿನೊಂದಿಗೇ ದಿನಗಳೆವ ಕಲಾವಿದರಿಗೆ ಶ್ರವಣ ಸಾಮರ್ಥ್ಯ ದುರ್ಬಲವಾಗುವ ಅಪಾಯ ಹೆಚ್ಚಿದೆ. ಈ ಹಿನ್ನಲೆಯಲ್ಲಿ ಶ್ರವಣ ಪರೀಕ್ಷೆಗೆ ಅವಕಾಶ ಮಾಡಿದ್ದು ಮೆಚ್ಚುವಂಥದ್ದು. ಇದರಿಂದ ಅನೇಕ ಕಲಾವಿದರಿಗೆ ಅನುಕೂಲವಾಗಿದೆ.




ನನ್ನೂರಾದ ಮಾರ್ವಿಯ ಯಕ್ಷ ಚೇತನ ಮಾರ್ವಿ ರಾಮಕೃಷ್ಣ ಹೆಬ್ಬಾರ್ ರವರ ಹನುಮಂತನ ಪಾತ್ರವೆಂದರೆ ಇದಿಗೂ ಅದೊಂದು ದಂತಕಥೆ. ಇಂಥಹ ಮಹಾಕಲಾವಿದರ ಬಗ್ಗೆ ಕೇಳಿದ್ದೆನಷ್ಟೆ ಹೊರತು ಅವರನ್ನು ನೋಡುವ ಯಾವುದೇ ದಾಖಲೆಗಳಿರಲಿಲ್ಲ. ಈ ಸಮ್ಮೇಳನದಲ್ಲಿ ಅವರ ಭಾವಚಿತ್ರವನ್ನು ನೋಡುವ ಅವಕಾಶ ದೊರಕಿದ್ದು ಖುಷಿಯ ವಿಚಾರ. ಜೊತೆಗೆ ಬಣ್ಣದ ವೇಷಧಾರಿಯಾಗಿದ್ದ ಸಕ್ಕಟ್ಟು ಲಕ್ಷ್ಮೀ ನಾರಾಯಣ, ಕುಮುಟಾ ಗೋವಿಂದ ನಾಯಕ್, ಚೆಂಡೆಯ ಮಹಾಕಲಾವಿದ ಕೆಮ್ಮಣ್ಣು ಆನಂದ, ನಾರ್ಣಪ್ಪ ಉಪ್ಪೂರ್, ಗುರು ವೀರಭದ್ರ ನಾಯಕ್, ಮೊದಲಾದವರ ಪರಿಚಯ ಸಹಿತ ಭಾವಚಿತ್ರಗಳಲ್ಲಿ ಮುಂದಿನ ಪೀಳಿಗೆಗೆ ಪರಿಚಯಿಸುವ ಕಾರ್ಯ ಅಭಿನಂದನಾರ್ಹ. ***ನಿಮ್ಮವನೇ,***

***ಗೋವಿಂದ ವಂಡಾರು***




ಗಮನಿಸಿ– ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅನಿಸಿಕೆ ಅಭಿಪ್ರಾಯಗಳು ಲೇಖಕರದ್ದೇ ಹೊರತು, ಸಂಪಾದಕ ಮಂಡಳಿಯದ್ದಲ್ಲ. ನಿಮ್ಮ ಪ್ರತಿಕ್ರಿಯೆಯನ್ನು ಕಳುಹಿಸಬೇಕಾದ ಇ–ಮೇಲ್ – nadanoopuravandaru@gmail.com ಮೊಬೈಲ್ ಸಂಖ್ಯೆ– 9482847978. ನಮ್ಮ ವೆಬ್ ಸೈಟ್ ವಿಳಾಸ– https://nyt.1ngo.in/ – ಸಂಪಾದಕರು

## ಸಂಪಾದಕೀಯ

*ಆತ್ಮೀಯ ಓದುಗರೆ,*

**ಸಾ**ಹಿತ್ಯ ಲೋಕದಲ್ಲಿ ಕೆಲವೊಂದು ಕೃತಿಗಳು ಮೌಲ್ಯಯುತ ಎಂದು ಪರಿಗಣಿಸಲ್ಪಟ್ರೆ ಕೆಲವೊಂದು ಕೇವಲ ಮನರಂಜನೆಗೆ ಮಾತ್ರ ಸೀಮಿತವಾಗಿರುತ್ತೆ. ಯಾವುದೇ ಒಂದು ಕೃತಿಗೆ ಮೌಲ್ಯ ಬರೋದು, ಅದು ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಅಥವ ನೈತಿಕ ಅಂಶಗಳ ಬಗ್ಗೆ ಬೆಳಕು ಚೆಲ್ಲಿದಾಗ. ಯಕ್ಷಗಾನ ಪ್ರಸಂಗದ ವಿಚಾರಕ್ಕೂ ಇದು ಅನ್ವಯವಾಗುತ್ತೆ. ಯಕ್ಷಗಾನದಲ್ಲಿ ವಿದ್ವಾಂಸರು ಕಾಲ್ಪನಿಕ ಪ್ರಸಂಗಗಳನ್ನು ನೋಡುವ ರೀತಿ ಅದು ಟೊಳ್ಳು ಎಂಬುದಾಗಿ. ಏಕೆ ಇದು ಹೀಗೆ ಎಂದು ಯೋಚಿಸಿದಾಗ, ನಾಲ್ಕೈದು ಪ್ರಕಾರಗಳಿಂದ ಎರವಲು ಪಡೆದ ವಸ್ತು ಚಿತ್ರಣಗಳು, ನಿಸ್ಸಾರವಾದ ಕಥೆ, ಅತಿರಂಜಿತ ಕ್ರೌರ್ಯ, ದುರುಳತನ, ಹರಟೆಯ ಹಾಸ್ಯ, ಅತಿನಾಟ್ಯ, ವಾದ ವಿವಾದ, ಕೊನೆಗೆ ಇದರ ಅಂತ್ಯ ಏನು ಅನ್ನೋದಕ್ಕೆ ಅರ್ಥವೇ ಇರೋದಿಲ್ಲ. ಪ್ರೇಕ್ಷಕರಲ್ಲಿ ಕೇಳಿದರೆ ಕಥೆ ಚೆನ್ನಾಗಿದೆ, ಒಳ್ಳೆ ಓಡ್ತಿದೆ ಅಂತ ಹೇಳಿದವರಲ್ಲಿ, ಕಥೆಯ ಸಾರ ತಿರುಳು ಸಂದೇಶ ಏನು ಅಂತ ಕೇಳಿದಾಗ ಅದರ ಬಗ್ಗೆ ಉತ್ತರಿಸಲು ಅಸಮರ್ಥರಾಗುತ್ತಾರೆ.

ಒಂದು ಪ್ರಸಂಗ ಕೃತಿಯಲ್ಲಿ ಕೆಲವೊಂದು ಪಾತ್ರಗಳ ಮೂಲಕ ಕೆಲವು ಆದರ್ಶಗಳ ಚಿತ್ರಣ, ಜನ, ಜೀವನ ಶೈಲಿಯ ಚಿತ್ರಣ, ಆಚಾರ, ವಿಚಾರ ಸಂಸ್ಕಾರಗಳು, ಟ್ವಿಸ್ಟ್(ತಿರುವು)ನಲ್ಲಿ ದ್ವೇಷ, ಸಂಘರ್ಷಗಳ ಹಿಂದೆ ಗಟ್ಟಿತನ, ಕೊನೆಗೊಂದು ಸಣ್ಣದಾದರೂ ಮೆಸೇಜ್ ಇದ್ದರೆ, ಪ್ರಸಂಗ ಕಥಾನಕವನ್ನು ವಿದ್ವಾಂಸರು ಸ್ವೀಕರಿಸಲೇಬೇಕು. ಸಾಹಿತ್ಯಿಕ ಮೌಲ್ಯವನ್ನು ಹೆಚ್ಚಿಸೋದ್ರಲ್ಲಿ ಛಂದಸ್ಸಿನ ಪ್ರಾಮುಖ್ಯತೆಯನ್ನೂ ಅರ್ಥ ಮಾಡಿಕೊಳ್ಳಬೇಕು. ಹಾಡಿನ ರಚನೆ, ಸ್ವರೂಪ, ರಾಗ, ಸಂಯೋಜನೆ ಇವೆಲ್ಲವನ್ನೂ ವ್ಯವಸ್ಥಿತವಾಗಿ ಅಧ್ಯಯನದ ಮೂಲಕ ಅರಿತು ಅಳವಡಿಸಿಕೊಂಡಾಗ ಕೃತಿಯ ಮೌಲ್ಯ ಖಂಡಿತ ಹೆಚ್ಚಾಗುತ್ತದೆ. ಇಂತಹಾ ಮೌಲ್ಯಗಳನ್ನು ಯಕ್ಷಗಾನದಲ್ಲಿ ಪ್ರೋತ್ಸಾಹಿಸುವ ಸಲುವಾಗಿಯೇ ನಾದನೂಪುರ ಟ್ರಸ್ಟ್ ಹೊಸ ಯೋಜನೆಗೆ ಮುಂದಾಗಿದೆ. ಸದ್ಯ ಪ್ರಸಂಗಕರ್ತರ ಸಾಹಿತ್ಯ ಸೇವೆಗೆ ಮಾನ್ಯತೆ ನೀಡ್ತಿರೋ ಪ್ರತಿಷ್ಠಿತ ಪ್ರಶಸ್ತಿ ಅಂದ್ರೆ ಕರ್ನಾಟಕ ಯಕ್ಷಗಾನ ಅಕಾಡೆಮಿಯಿಂದ ನೀಡ್ತಿರೋ ಪಾರ್ತಿಸುಬ್ಬ ಪ್ರಶಸ್ತಿ. ಈ ಪ್ರಶಸ್ತಿಯು ಪೌರಾಣಿಕ ಪ್ರಸಂಗಳ ರಚನೆಗೆ ಹೆಚ್ಚಿನ ಮಾನ್ಯತೆ ನೀಡಲಾಗಿದೆ. ಆದರೆ ಅದೇ ಮಾನ್ಯತೆ ಕಾಲ್ಪನಿಕ ಪ್ರಸಂಗಗಳಿಗಿಲ್ಲ ಅನ್ನೋದು ಬೇಸರದ ಸಂಗತಿ. ಸೃಜನಶೀಲತೆ ಅನ್ನೋದು ನಿರಂತರವಾಗಿ ಅರಳಿ ಬರುವ ಪ್ರಕ್ರಿಯೆಯಾಗಿರಬೇಕು. ಪ್ರಸಂಗ ರಚನೆ ಪೌರಾಣಿಕ ಕಥಾನಕಗಳಿಗೆ ಮಾತ್ರ ಸೀಮಿತವಾಗಿರಬಾರದು. ಹೊಸ ಹೊಸ ಸಾಹಿತ್ಯಗಳು ಪ್ರತೀ ಕಾಲಘಟ್ಟದಲ್ಲೂ ಮೂಡಿಬರಬೇಕು ಹಾಗೂ ಆ ರಚನೆಗಳು ಒಂದಷ್ಟು ಮೌಲ್ಯಗಳನ್ನು ಹೊಂದಿರಬೇಕು. ಅಂತಹ ಪ್ರಸಂಗಗಳನ್ನು ಗುರುತಿಸಿ ಪ್ರಸಂಗ ಕೃತಿಗೆ ಪ್ರಶಸ್ತಿ ಸಹಿತ ಪ್ರೋತ್ಸಾಹ ನೀಡೋ ಉದ್ದೇಶ ಈ ಟ್ರಸ್ಟ್ ನದ್ದು. ನಾದನೂಪುರ ವಂಡಾರು ಟ್ರಸ್ಟ್ ನ ವಾರ್ಷಿಕ ಕಾರ್ಯಕ್ರಮದಲ್ಲಿ ಅಂತಹ ಗುಣಮಟ್ಟದ ಕಾಲ್ಪನಿಕ ಪ್ರಸಂಗಗಳನ್ನು ಗುರುತಿಸಿ ಕೃತಿಗೆ ಗೌರವ ನೀಡುವ ಉದ್ದೇಶದಿಂದ ನನ್ನ ಮಾತೃಶ್ರೀಯವರ ಸ್ಮರಣಾರ್ಥ ಶ್ರೀಮತಿ ಯಶೋದಾ ದೇವಿ ಪ್ರಸಂಗ ಮಾಣಿಕ್ಯ ಎಂಬ ಪುರಸ್ಕಾರ ನೀಡಲು ನಿರ್ಧರಿಸಲಾಗಿದೆ. ಟ್ರಸ್ಟ್ ನ ಈ ವರ್ಷದ ಕ್ರಿಯಾಯೋಜನೆಯಲ್ಲಿ ಇದೊಂದು ಮಹತ್ತರ ಹೆಜ್ಜೆಯಾಗಿದೆ. ಪ್ರಸಂಗ ಆಯ್ಕೆಗೆ ಕೆಲವೊಂದು ಮಾನದಂಡಗಳನ್ನೂ ನಿಗದಿಪಡಿಸಲಾಗಿದೆ. ಜೊತೆಗೆ ಪ್ರಬುದ್ಧ ಪ್ರಸಂಗಕರ್ತರ ಕಮಿಟಿ ಪ್ರಶಸ್ತಿಗೆ ಯಕ್ಷಗಾನ ಕೃತಿಯನ್ನು ಆಯ್ಕೆ ಮಾಡಲಿದೆ. ನಮ್ಮ ಈ ಹೊಸ ಹೆಜ್ಜೆಯಲ್ಲಿ ನಿಮ್ಮ ಸಲಹೆ ಸೂಚನೆಗಳು ನಮ್ಮೊಂದಿಗಿರಲಿ. – **ಶುಭಾಶಯ**

## ಯಕ್ಷಗಾನ ಕನ್ನಡದ ಅಸ್ಮಿತೆ –ಯಕ್ಷಗಾನ ಗೋಷ್ಠಿಯ ವಿಷಯ ಮಂಡನಾಕಾರನಾಗಿ ನನ್ನ ಅನುಭವ – ಡಾ. ದಿನಕರ್ ಪಚ್ಚನಾಡಿ



ಯಕ್ಷಗಾನ ರಾಜ್ಯ ಸಮ್ಮೇಳನದಲ್ಲಿ 'ಯಕ್ಷಗಾನ ಕನ್ನಡದ ಅಸ್ಮಿತೆ' ಎಂಬ ವಿಷಯದ ಕುರಿತಾಗಿ ನಡೆದ ಗೋಷ್ಠಿಯ ಅಧ್ಯಕ್ಷತೆಯನ್ನು ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್ ಅವರು ವಹಿಸಿ ಶ್ರೀ ಸುರೇಂದ್ರ ಪಣಿಯೂರು ಗೋಷ್ಠಿಯ ನಿರ್ವಹಣೆ ಮಾಡಿದ್ದರು.


ಕನ್ನಡ ಶಾಸ್ತ್ರೀಯ ಭಾಷೆಗೆ ಯಕ್ಷಗಾನದ ಕೊಡುಗೆ ಈ ವಿಷಯವಾಗಿ ಡಾ. ಪಾದೆಕಲ್ಲು ವಿಷ್ಣುಭಟ್ ಅವರು ಮಾತಾಡಿದ್ದರು. ಕನ್ನಡ ಭಾಷೆಗೆ ಯಕ್ಷಗಾನದ ಆಶು ಸಾಹಿತ್ಯ ಅಥವಾ ಅರ್ಥ ಗಾರಿಕೆಯ ಮಾತು ಮತ್ತು ಪ್ರಸಂಗ ಪಧ್ಯದಲ್ಲಿರುವ ಪದ ರಚನೆಯ ಮೂಲಕ ಅನನ್ಯವಾದ ಕೊಡುಗೆಯನ್ನು ನೀಡಿದೆ. ಅದರ ಅಧ್ಯಯನ ಸಮಗ್ರವಾಗಿ ಆಗಬೇಕಾಗಿದೆ ಎಂದರು.

'ಯಕ್ಷಗಾನ ಪ್ರಸಂಗ ಪಧ್ಯಗಳಲ್ಲಿ ಕಾವ್ಯ ಸೌಂದರ್ಯ' ಎಂಬ ವಿಚಾರವಾಗಿ ನಾನು ಮಂಡಿಸಿದೆ. ಕನ್ನಡ ಸಾಹಿತ್ಯ ಚರಿತೆಯಲ್ಲಿ ಚಂಪೂ ಸಾಹಿತ್ಯ, ವಚನ ಸಾಹಿತ್ಯ, ರಗಳೆ, ಷಟ್ಪದಿ ಸಾಹಿತ್ಯ, ಕೀರ್ತನಾ ಸಾಹಿತ್ಯ ಹೇಗೆ ಸ್ಥಾನ–ಮಾನವನ್ನು ಪಡೆದಿದೆಯೋ ಹಾಗೆಯೇ ಯಕ್ಷಗಾನ ಸಾಹಿತ್ಯ ಗಮನಾರ್ಹ. ಹದಿನಾರನೇ ಶತಮಾನದಿಂದ ಸಾವಿರಕ್ಕೂ ಮಿಕ್ಕಿ ಪ್ರಸಂಗಗಳು ರಚನೆಯಾಗಿವೆ. ಖಂಡಕಾವ್ಯಗಳಿಗೆ ಸಮದಂಡಿಯಾಗಿ ಪ್ರಸಂಗಗಳು ರಚನೆಯಾಗಿರುವಾಗ, ಪಾರ್ತಿಸುಬ್ಬ, ಹೊಸ್ತೋಟದವರ ರಾಮಾಯಣದ ಮಹಾ ಸಂಪುಟಗಳೇ ಇರುವಾಗ ಅವಗಣನೆ ಸಲ್ಲದು. ರಾತ್ರಿ ಪ್ರದರ್ಶನಕ್ಕೆ ಬಳಕೆಯಾಗುತ್ತಾ ಇದ್ದುದರಿಂದ ಸಾಹಿತ್ಯ ಚರಿತೆ ಬರೆದವರಿಗೆ ಕಣ್ಣಿಗೆ ಕಾಣದಿದ್ದುದೇ ಮಹಾ ಪ್ರಮಾದ. ಪ್ರಸಂಗ ಪಧ್ಯವನ್ನು ಆಧರಿಸಿ ಅಲಂಕಾರ, ಧ್ವನಿ, ರಸ ಹಾಗೂ ಛಂದೋಬದ್ಧತೆಯ ಮೊದಲಾದ ವಿಚಾರಗಳನ್ನು ಪ್ರಸ್ತುತಪಡಿಸಿದೆ.

'ಯಕ್ಷಗಾನ ಮತ್ತು ಕನ್ನಡದ ಆಶು ಪರಂಪರೆಯ ಸ್ವರೂಪ' ಶೀರ್ಷಿಕೆಯನ್ನು ಆಧರಿಸಿ ಡಾ. ಶ್ರೀಧರ್ ಹೆಗಡೆ ಭದ್ರನ್ ವಿಷಯ ಪ್ರಸ್ತಾಪ ಮಾಡಿದರು. ಪರಿಶುದ್ಧವಾದ ಕನ್ನಡ ಭಾಷೆಯಲ್ಲಿ ಯಕ್ಷಗಾನದ ಅರ್ಥಗಾರಿಕೆ ಮಂಡನೆಯಾಗುತ್ತಿದ್ದು ಸಂವಾದ ಹಾಗೂ ಚರ್ಚೆಯ ವಿಚಾರವೆಲ್ಲಾ ಅಧ್ಯಯನಕ್ಕೆ ಯೋಗ್ಯವಾಗಿವೆ. ಶೇಣಿಯವರ ಅರ್ಥಗಾರಿಕೆ ಬಹುಮಟ್ಟಿಗೆ ಅಧ್ಯಯನ ಆದಂತಿದೆ ಎಂದರು.


ಗೋಷ್ಠಿಯ ಅಧ್ಯಕ್ಷರು ಅಂತಿಮವಾಗಿ ಮಾತಾಡಿ, ಪ್ರಸಂಗ ಸಾಹಿತ್ಯ ಮತ್ತು ಆಶು ಸಾಹಿತ್ಯದ ಅಧ್ಯಯನವಾಗಬೇಕಾಗಿದೆ, ದಾಖಲೆಯಾಗಬೇಕಾಗಿದೆ. ನಿಜ ಸತ್ವವನ್ನು ಹೊರಹೊಮ್ಮಿಸುವ ಕಾರ್ಯವಾಗಬೇಕಾಗಿದೆ. ಈ ಕಾರ್ಯವನ್ನು ಮಾಡುವವರು ಯಾರು? ಕೇಳುವವರು ಯಾರು? ಕೇವಲ ತನ್ನ ಒಬ್ಬನ ಧ್ವನಿ ಏನೂ ಮಾಡಲಾರದು? ಎಂದು ವಿಷಾದ ವ್ಯಕ್ತ ಪಡಿಸಿದರು. 'ಯಕ್ಷಗಾನ ಕನ್ನಡದ ಅಸ್ಮಿತೆ' ಎನ್ನುವ ವಿಷಯಕ್ಕೆ ತಕ್ಕಂತೆ ಈ ಗೋಷ್ಠಿ ಔಚಿತ್ಯ ಪೂರ್ಣವಾಗಿ ನೆರವೇರಿತು.

## ಬಲಿಪ ನಾರಾಯಣ ಭಾಗವತ ಮತ್ತು ಅಂಬಾತನಯ ಮುದ್ರಾಡಿಯವರ ಯಕ್ಷ ಕೃತಿಗಳ ಮೇಲೊಂದು ನೋಟ



**‘ಯಕ್ಷಗಾನ ಸಾಹಿತ್ಯ ಲೋಕಕ್ಕೆ ಇಬ್ಬರು ಹಿರಿಯ ಪ್ರಸಂಗಕರ್ತರನ್ನು ಕಳೆದುಕೊಂಡ ಸೂತಕ. ಫೆಬ್ರವರಿ 16 ರಂದು ಕಿರಿಯ ಬಲಿಪ ನಾರಾಯಣ ಭಾಗವತರು ದಿವಂಗತರಾದರೆ ಮತ್ತೊಬ್ಬ ಕವಿ ಅಂಬಾತನಯ ಮುದ್ರಾಡಿಯವರು ಫೆಬ್ರವರಿ 21 ರಂದು ಇಹಲೋಕ ತ್ಯಜಿಸಿದ್ದಾರೆ. ಅಗಲಿದ ಮಹಾಚೇತನಗಳಿಗೆ ಶಾಂತಿ ಕೋರುತ್ತಾ ಈ ಇಬ್ಬರು ಮಹನೀಯರು ಯಕ್ಷಗಾನ ಸಾಹಿತ್ಯ ಲೋಕಕ್ಕೆ ನೀಡಿರುವ ಕೊಡುಗೆಯನ್ನು ಸ್ಮರಿಸುವ ಉದ್ದೇಶದಿಂದ ಈ ಕಿರು ಲೇಖನ**

ಕಿರಿಯ ಬಲಿಪ ನಾರಾಯಣ ಭಾಗವತರು (1938–2023) ತೆಂಕುತಿಟ್ಟಿನ ಪ್ರಸಿದ್ಧ ಬಲಿಪ ಮನೆತನದವರು. ಹಿರಿಯ ಬಲಿಪ ನಾರಾಯಣ ಭಾಗವತರು ಇವರ ಅಜ್ಜ. ತಂದೆ ಮಾಧವ ಭಟ್ಟ, ತಾಯಿ ಸರಸ್ವತಿ. ಮೂಡಬಿದ್ರಿ ಸಮೀಪದ ಮಾರೂರು ಎಂಬಲ್ಲಿ ವಾಸವಾಗಿದ್ದ ಇವರು, ಅರುವತ್ತು ವರ್ಷಗಳ ಕಾಲ ಕಟೀಲು ಮೇಳದಲ್ಲಿ ಪಧಾನ ಭಾಗವತರಾಗಿ ಸೇವೆ ಸಲ್ಲಿಸಿದ್ದಲ್ಲದೆ ಸುಮಾರು 38 ಯಕ್ಷಗಾನ ಪ್ರಸಂಗಗಳನ್ನು ರಚಿಸಿ ಯಕ್ಷಗಾನ ಕಲೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು. ಸ್ವಯಂ ಭಾಗವತರಾಗಿದ್ದ ಇವರು ಲಯಬದ್ಧವಾದ ಪದ್ಯಗಳ, ಛಂದೋಬದ್ಧ ಸರಳ ಸಾಹಿತ್ಯದಿಂದ ಕೂಡಿದ ಪ್ರಸಂಗಗಳನ್ನು ರಚಿಸಿದ ಯಕ್ಶಗಾನ ಕವಿ. ಬಲಿಪ ಭಾಗವತರು ಶ್ರೀ ದೇವಿ ಮಹಾತ್ಮೆ ಯಕ್ಷಗಾನ ಪ್ರಸಂಗವನ್ನು ಸುರಥ ವೈಶ್ಯರ ಚರಿತ್ರೆ, ಮಧುಕೈಭಟರ ವಧೆ, ರಂಭ ಕರಂಭಾಸುರರ ವಧೆ, ಮಹಿಷಾಸುರ ವಧೆ, ಶುಭ ನಿಶುಂಭ ವಧೆ ಹೀಗೆ ಐದು ವಿಭಾಗದಲ್ಲಿ ಐದು ದಿನ ಯಕ್ಷಗಾನ ಪ್ರದರ್ಶನಕ್ಕೆ ಅನುಕೂಲವಾಗುವಂತೆ ರಚಿಸಿದ್ದಾರೆ. ಇದನ್ನು ಕಜೆ ಸುಬ್ರಮಣ್ಯ ಭಟ್ಟರು 2010ರಲ್ಲಿ ಪ್ರಕಟಿಸಿದ್ದಾರೆ. ಕಿರಿಯ ಬಲಿಪ ಭಾಗವತರ ಅಜಾಮಿಳ ಚರಿತ್ರೆ, ಶಕಟಾಸುರಾದಿಗಳ ವಧೆ, ಮೂರುವರೆ ರತ್ನ ಪ್ರಸಂಗಗಳನ್ನು ಎಚ್‌ಬಿಎಲ್ ರಾವ್ ನೇತೃತ್ವದ ಪದವೀಧರ ಯಕ್ಷಗಾನ ಸಮಿತಿ ಮುಂಬಯಿ ಇವರು 2002ರಲ್ಲಿ ಕಣಂಜಾರು ಆನಂದ ಶೆಟ್ಟಿ ಸಂಸ್ಮರಣಾ ಯಕ್ಷಗಾನ ಪ್ರಸಂಗ ಮಾಲಿಕೆ ಸಂಪುಟ–22ರಲ್ಲಿ ಪ್ರಕಟಿಸಿದ್ದಾರೆ. ಇದೆ ಪ್ರಕಾಶನ ಸಂಸ್ಥೆಯವರು 1998ರಲ್ಲಿ ಡಾ ಶಿವರಾಮ ಕಾರಂತ ಸಂಸ್ಮರಣಾ ಯಕ್ಷಗಾನ ಮಾಲಿಕೆ ಸಂಪುಟ 15ರಲ್ಲಿ ಕಿರಿಯ ಬಲಿಪ ಭಾಗವತರ ಅಮೃತಾಪಹರಣ (ಗರುಡೋದ್ಭವ), ಮಿತ್ರಗುಪ್ತ ವಿಜಯ (ಕಂತುಕಾವತಿಕಲ್ಯಾಣ), ನವಗ್ರಹ ಮಹಾತ್ಮೆ, ಕಾಳಿಂದಿ ವಿವಾಹ, ಕೇತಕೀ ಶಾಪ ಎನ್ನುವ ಐದು ಪ್ರಸಂಗಗಳನ್ನು ಪ್ರಕಟಿಸಿದ್ದಾರೆ. ಬಲಿಪ ಭಾಗವತರ ಏಕಲವ್ಯನ ಗುರು ಭಕ್ತಿ ಪ್ರಸಂಗ, ಕಾಲ ನೇಮಿಕಾಳಗ, ಡಂಭೋದ್ಭವ, ಮಹಾ ದಾನಿ ಶಿಬಿಚಕ್ರವರ್ತಿ, ರಂತಿದೇವೋಪಾಖ್ಯಾನ ಪ್ರಸಂಗ ಕೃತಿಗಳು ಕೂಡ ಮುಂಬಯಿ ಪಧವೀಧರ ಯಕ್ಷಗಾನ ಸಮಿತಿಯ ಈ ರಾಮನಾಯಕ ಜನ್ಮ ಶತಾಬ್ದ ಸಂಸ್ಮರಣಾ ಯಕ್ಷಗಾನ ಪ್ರಸಂಗ ಮಾಲಿಕೆ ಸಂಪುಟ–23ರಲ್ಲಿ 2002ರಲ್ಲಿ ಪ್ರಕಟವಾಗಿದೆ. ಬಲಿಪ ಕಿರಿಯ ಭಾಗವತರ ಯಶೋಮತಿ– ಏಕಾವಳೀ ವಿವಾಹ , ದ್ವಿದಶಿರನ ಕಾಳಗ ಪ್ರಸಂಗಳನ್ನು ಪಧವೀಧರ ಯಕ್ಷಗಾನ ಸಮಿತಿ, ಮುಂಬಯಿ ಇವರು 2000ರಲ್ಲಿ ಭಾಗವತ ಕಾಳಿಂಗ ನಾವಡ ಯಕ್ಷಗಾನ ಸಂಸ್ಮರಣಾ ಪ್ರಸಂಗ ಮಾಲಿಕೆ ಸಂಪುಟ 19ರಲ್ಲಿ ಪ್ರಕಟಿಸಿದ್ದಾರೆ. ಶಿವಪ್ರಭಾ ಪರಿಣಯ ಪ್ರಸಂಗ ಕೃತಿ 1989ರಲ್ಲಿ ಮುಂಬಯಿಯ ಪದವೀಧರ ಯಕ್ಷಗಾನ ಸಮಿತಿ ಇವರ ಕಿರಿಯ–ಹಿರಿಯ ಬಲಿಪ ನಾರಾಯಣ ಭಾಗವತರ ಪ್ರಸಂಗಗಳು ಸಂಪುಟ–10 ಇದರಲ್ಲಿ ಪ್ರಕಟವಾಗಿದೆ. ಶ್ರವಣಕುಮಾರ ಚರಿತ್ರೆ ಮತ್ತು ಶ್ರೀ ಕೃಷ್ಣ ತುಲಾಭಾರ ಯಕ್ಷಗಾನ ಪ್ರಸಂಗಗಳು ಕಜೆ ಸುಬ್ರಮಣ್ಯ ಭಟ್ಟರಿಂದ ಪ್ರಕಟಿತವಾಗಿದೆ. ನಟ ಚರಿತ್ರೆ ಅಥವಾ ಆಟದೊಳಗಿನ ಆಟ ಎನ್ನುವ ಪ್ರಸಂಗ ಕೃತಿಯನ್ನು ಬಲಿಪ ಕಿರಿಯ ಭಾಗವತರು 1963ರಲ್ಲಿ ಮತ್ತು ನಾಗವಿಜಯ ಅಥವಾ ನಾಗಸಿರಿಕನ್ಯೆ ಪ್ರಸಂಗವನ್ನು 1961 ರಲ್ಲಿ ಭಸ್ಮಾಸುರ ಮೋಹಿನಿ ಪ್ರಸಂಗ ಕೃತಿಯನ್ನು1968ರಲ್ಲಿ ತಾವೇ ಪ್ರಕಟಿಸಿದ್ದಾರೆ. ಇವುಗಳಲ್ಲದೆ ಅಶ್ವತ್ಥಾಮ, ಇಂದ್ರಚಂದ್ರರ ಕಾಳಗ, ಕಮಲಾಕ್ಷ ಪದ್ಮಾಕ್ಷಿ ವಿವಾಹ, ಕಲ್ಕ್ಯವತಾರ, ಗಾಯತ್ರಿಮಹಾತ್ಮೆ, ಪ್ರತಾಪನಸಾಹಸ, ಭೌಮಾಸುರಕಾಳಗ, ಮೈತ್ರಾವರುಣಿ ಮಹಿಮೆ, ಶ್ರೀಕೃಷ್ಣ ಕಾರುಣ್ಯಾ, ಸತಿ ತಿಲೋತ್ತಮೆ, ಹಿರಣ್ಯ ಮಣಿ ಕಲ್ಯಾಣ ಮೊದಲಾದ ಪ್ರಸಂಗ ಕೃತಿಗಳು ಸೇರಿದಂತ 38 ಪ್ರಸಂಗಗಳನ್ನು ರಚಿಸಿರುವುದಾಗಿ ತಿಳಿದುಬರುತ್ತದೆ.



**ಅಂಬಾತನಯ ಮುದ್ರಾಡಿ** ಎಂದು ಪ್ರಸಿದ್ಧರಾಗಿರುವ **ಕೇಶವ ಶೆಟ್ಟಿಗಾರ**(1935–2023)ರು ಹನ್ನೆರಡು ಯಕ್ಷಗಾನ ಪ್ರಸಂಗಳನ್ನು ರಚಿಸಿದ್ದಾರೆ. ಇವರ ತಂದೆ ಬೂಬ ಶೆಟ್ಟಿಗಾರ ಮತ್ತು ತಾಯಿ ಪುಟ್ಟಮ್ಮ ವೃತ್ತಿಯಲ್ಲಿ ಶಾಲಾ ಶಿಕ್ಷಕರಾಗಿ, ಪ್ರವೃತ್ತಿಯಲ್ಲಿ ಯಕ್ಷಗಾನ ಕಲಾವಿದರಾಗಿ, ಹರಿದಾಸರಾಗಿ, ಸಾಹಿತಿಯಾಗಿ ಪ್ರಸಿದ್ದರು. ಅಂಬಾತನಯ ಮುದ್ರಾಡಿಯವರು ಭಕ್ತ ಪ್ರಹ್ಲಾದ, ಹನುದ್ವಿಲಾಸ, ಅನಂಗಲೇಖಾ, ಕ್ರಿಸ್ತಕಾರುಣ್ಯ, ರಾಜಾಚಿತ್ರಕೇತು, ಚಿತ್ರಲೇಖಾ, ಸತೀ ರೂಪಮತಿ, ಬಾರ್ಕೂರು ವೈಭವ, ಸುರತ್ಕಲ್ ಕ್ಷೇತ್ರ ಮಹಾತ್ಮೆ, ಮರೂರು ಕ್ಷೇತ್ರಮಹಾತ್ಮೆ, ಯಕ್ಷವಿಜಯ, ಪಂಚ ಭೂತ ಪ್ರಪಂಚ ಮುಂತಾದ ಯಕ್ಷಗಾನ ಪ್ರಸಂಗ ಕೃತಿಗಳನ್ನು ರಚಿಸಿದ್ದಾರೆ. ಅವರ ಯಕ್ಷಗಾನ ಕೃತಿಗಳು ಉತ್ತಮ ರಂಗಕೃತಿಗಳಾಗಿ ಹೆಸರು ಗಳಿಸಿವೆ. ಅಂಬಾತನಯರ ಪರಿಸರ ಮಾಲಿನ್ಯ ಪರಿಣಾಮ ಕುರಿತ. ಪಂಚಭೂತ ಪ್ರಪಂಚ ಯಕ್ಷಗಾನ ಪ್ರಸಂಗ ಕೃತಿಯನ್ನು ಕರ್ನಾಟಕ ಯಕ್ಷಗಾನ ಅಕಾಡೆಮಿಯವರು 2019ರಲ್ಲಿ ಪ್ರಕಟಿಸಿದ್ದಾರೆ. ಮುದ್ರಾಡಿಯವರ ಮಹಾಸತಿ ಅನಸೂಯ ಪ್ರಸಂಗ ಕೃತಿ 2000 ರಲ್ಲಿ ಪಧವೀಧರ ಯಕ್ಷಗಾನ ಸಮಿತಿ ಮುಂಬಯಿ ಇವರ ದೇಶಭಕ್ತ ನಾರಾಯಣ ಕಿಲ್ಲೆ ಯಕ್ಷಗಾನ ಸಂಸ್ಮರಣಾ ಯಕ್ಷಗಾನ ಪ್ರಸಂಗ ಮಾಲಿಕೆ ಸಂಪುಟ 20ರಲ್ಲಿ ಮತ್ತು ಭಕ್ತ ಪ್ರಹ್ಲಾದ ಪ್ರಸಂಗ ಕಟೀಲು ಗೋಪಾಲಕೃಷ್ಣ ಅಸ್ರಣ್ಣ ಸಂಸ್ಮರಣಾ ಪ್ರಸಂಗ ಮಾಲಿಕೆ ಸಂಪುಟ 26ರಲ್ಲಿ ಪ್ರಕಟವಾಗಿವೆ. ರಾಜ್ಯೋತ್ಸವ ಪ್ರಶಸ್ತಿ, ಪಾರ್ತಿಸುಬ್ಬ ಪ್ರಶಸ್ತಿ ಮುಂತಾದ ಶ್ರೇಷ್ಠ ಗೌರವಗಳು ಅವರಿಗೆ ಅರ್ಹವಾಗಿ ಸಂದಿವೆ. ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿಯೂ ಸೇವೆ ಮಾಡಿದ್ದಾರೆ. ಕಾಂತಾವರ ಕನ್ನಡ ಸಂಘದ **‘ನಾಡಿಗೆ ನಮಸ್ಕಾರ’** ಸಾಹಿತ್ಯ ಸಂಸ್ಕೃತಿ ಚಿಂತನ ಗ್ರಂಥಮಾಲೆಯಾಗಿ **“ಸ್ವ ಪ್ರಯತ್ನದ ಧೀಮಂತ ಲೇಖಕ – ಅಂಬಾತನಯ ಮುದ್ರಾಡಿ”** ಎಂಬ ಪುಸ್ತಕವು 2017ರಲ್ಲಿ ಪ್ರಕಟವಾಗಿತ್ತು. – ***ಲೇಖಕರು –ಉಮೇಶ ಶಿರೂರು ಬೆಂಗಳೂರು 9448353910***

# ತಾಳಮದ್ದಳೆಯಲ್ಲಿ ಅರ್ಥಗಾರಿಕೆಗೆ ಬೇಕಾದ ಅಂಶಗಳು

**ತಾ**ಳಮದ್ದಳೆ ಕೂಟಗಳಲ್ಲಿ ಅರ್ಥ ಹೇಳುವುದೂ ಒಂದು ಕಲೆ. ಇದನ್ನು ಹೇಗೆ ಪ್ರಸ್ತುತಪಡಿಸಬಹುದು ಎಂಬುದನ್ನು ಈ ಲೇಖನದಲ್ಲಿ ಬರೆದಿದ್ದೇನೆ. ಈ ಲೇಖನದಲ್ಲಿ ಬರುವ ವಿಷಯಗಳೆಲ್ಲಾ ವೃತ್ತಿಪರ ಕಲಾವಿದರಿಗೆ ತಿಳಿದಿರುವುದೇ. ಆದ ಕಾರಣ ಹವ್ಯಾಸಿ ಅರ್ಥಧಾರಿಗಳಿಗಾಗಿ ಈ ಲೇಖನ. ಆದರೂ ವೃತ್ತಿಪರರಿಗೂ ಅನ್ವಯವಾಗುವಂಥಹುದು. ತಾಳಮದ್ದಳೆಯಲ್ಲಿ ಅರ್ಥಗಾರಿಕೆಗೆ ಬೇಕಾದ ಅಂಶಗಳು

***ಅರ್ಥಧಾರಿ ಎನಿಸಬೇಕಾದರೆ ಈ ಕೆಳಗಿನ ಅಂಶಗಳ ಬಗ್ಗೆ ಗಮನ ಹರಿಸಬೇಕು.***

***1. ಆಕರ:*** ಅರ್ಥಧಾರಿಗಳು ರಾಮಾಯಣ, ಮಹಾಭಾರತ ಹಾಗೂ ಪೌರಾಣಿಕ ಕಥೆಯನ್ನು ತಿಳಿದಿರಬೇಕಾದುದು ಪ್ರಥಮ ಅರ್ಹತೆ. ಶಾಸ್ತ್ರ, ವೇದ, ಉಪನಿಷತ್ತುಗಳ ಬಗ್ಗೆ ಓದಿದರೆ ಅರ್ಥವೈಭವ ಇನ್ನಷ್ಟು ಉತ್ತಮವಾದೀತು. "ಆಶುಕವಿತ್ವ" ಇದ್ದರೆ ಒಳ್ಳೆಯದು.

***2. ಬದ್ಧತೆ:*** ಅರ್ಥಧಾರಿಗಳು ಪ್ರಸಂಗಕ್ಕೇ ಬದ್ಧರಾಗಬೇಕು. ಮೂಲ ಹಾಗೂ ಅನುವಾದಗಳು ಏನಿದ್ದರೂ, ಪ್ರಸಂಗದ ಪದ್ಯಗಳಿಗೇ ಬದ್ಧನಾಗಿರಬೇಕಾದುದು ಅರ್ಥಧಾರಿಗಳ ಪ್ರಧಾನ ಅವಶ್ಯಕತೆ ಹಾಗೂ ಕರ್ತವ್ಯ. ಕೆಲವು ಪ್ರಸಂಗಗಳಲ್ಲಿ ಮೂಲಕ್ಕೆ ವ್ಯತಿರಿಕ್ತವಾದುದು ಇದ್ದರೂ ಅಥವಾ ಮೂಲದಲ್ಲೇ ಇಲ್ಲದ್ದು ಇದ್ದರೂ, ಆ ಪ್ರಸಂಗದ ಮಟ್ಟಿಗೆ, ಪದ್ಯಗಳಲ್ಲಿ ಇರುವುದೇ ಸರಿ. ಪ್ರಸಂಗದ ಆಶಯಕ್ಕೇ ಬದ್ಧನಾಗಿರಬೇಕೇ ಹೊರತು ಮೂಲಕ್ಕಲ್ಲ. ಹಾಗೆಂದು ಮೂಲದ ಜ್ಞಾನ ಹೊಂದಿರಬೇಕು. ಉದಾಹರಣೆ: "ಕೃಷ್ಣಾರ್ಜುನ ಕಾಳಗ" "ರಾಮಾಂಜನೇಯ ಯುದ್ಧ" ಮೂಲದಲ್ಲಿಲ್ಲದ ಪ್ರಕರಣ. ಆದರೂ, ಇಂಥಹ ಪ್ರಸಂಗಗಳಲ್ಲಿ, ಪ್ರಸಂಗದ ಪದ್ಯಗಳಿಗೇ ಅರ್ಥಧಾರಿಗಳು ಬದ್ಧರಾಗಬೇಕು. ಆ ಪ್ರಸಂಗದ ಮಟ್ಟಿಗೆ ಪ್ರಸಂಗದ ಪದ್ಯಗಳೇ ಅರ್ಥಕ್ಕೆ ಆಧಾರ. ಅದೇ ರೀತಿ ಮೂಲಕ್ಕೆ ಭಿನ್ನವಾದುದು ಪ್ರಸಂಗಗಳಲ್ಲಿರಬಹುದು. ಆದರೆ ಪ್ರಸಂಗದ ಪದ್ಯವೇ ಅರ್ಥಧಾರಿಗಳಿಗೆ ಆಧಾರವಾಗಬೇಕಾಗುತ್ತದೆ. ಮೂಲದಲ್ಲಿ ಆ ರೀತಿ ಇಲ್ಲವೆಂದು ಸಾಧಿಸಲು ಹೋಗುವಂತಿಲ್ಲ.

***3. ಅರ್ಥಧಾರಿಗಳು:*** ಅರ್ಥ ಹೇಳುವಾಗ ಆ ಪಾತ್ರದ ಘನತೆ ಅರಿತು ಅರ್ಥ ಹೇಳಬೇಕೇ ಹೊರತು ತಮ್ಮ ವ್ಯಕ್ತಿ ಪ್ರತಿಷ್ಠೆ ಬದಿಗಿರಿಸಬೇಕು. ತಾನು ಪಾತ್ರವಾಗಬೇಕೇ ಹೊರತು ಪಾತ್ರ ತಾನಾಗಕೂಡದು. ತನ್ನಲ್ಲಿ ವಿದ್ವತ್ ಇದೆಯೆಂಬ ಕಾರಣಕ್ಕೋ ಅಥವಾ ಎದುರು ಪಾತ್ರಧಾರಿ ದುರ್ಬಲನೆಂದೋ ತಿಳಿದು "ವಿತಂಡವಾದ" ಮಾಡಕೂಡದು. ಸೋಲಬೇಕಾದ ಪಾತ್ರ ಸೋಲಬೇಕೇ ಹೊರತು, ತನ್ನ ವಿದ್ವತ್ತಿನ ಮೂಲಕ "ಗೆಲ್ಲಿಸುವುದು" ಸರ್ವಥಾ ಕಲೆಗೆ ಮಾಡುವ ಅಪಚಾರ. ಪ್ರಸಂಗದಲ್ಲಿ ಪಾತ್ರದ ಅನಾವರಣವಾಗಬೇಕೇ ಹೊರತು ಪಾತ್ರಧಾರಿಗಳ ಅನಾವರಣವಾಗಕೂಡದು. ನಮ್ಮ ವಿದ್ವತ್ತು ಆ ಪ್ರಸಂಗಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಬಳಸಿಕೊಳ್ಳಬೇಕು.



***4. ಸಂಸ್ಕೃತ ಶ್ಲೋಕಗಳ ಬಳಕೆ:*** ಪಾತ್ರದ ಔಚಿತ್ಯ ಅರಿತು ಸಂಸ್ಕೃತ ಶ್ಲೋಕ ಬಳಸಬೇಕೇ ಹೊರತು, ಅರ್ಥಧಾರಿಗಳು, ತನಗೆ ತಿಳಿದಿದೆ ಎಂಬ ಕಾರಣಕ್ಕೆ ಸಂಸ್ಕೃತ ಶ್ಲೋಕಗಳನ್ನು ಬಳಸಬಾರದು. ಕಿರಾತ, ಅಗಸ, ಓಲೆದೂತ, ಕುರುಬ ಮುಂತಾದ ಪಾತ್ರ ಮಾಡುವಾಗ ಸಂಸ್ಕೃತ ಶ್ಲೋಕ ಬಳಕೆ ಸಾಧುವಲ್ಲ. ಅದೇ ರೀತಿ ಶೂರ್ಪಣಖೀ, ಮಹಿಷಾಸುರ, ಬಕಾಸುರ, ಕಿಮ್ಮೀರ ಮುಂತಾದ ರಾಕ್ಷಸ ಪಾತ್ರಗಳು ಮಿತಿಮೀರಿ ಸಂಸ್ಕೃತ ಶ್ಲೋಕ ಬಳಸಿದರೆ ಅಭಾಸವಾಗುತ್ತದೆ. ಸಂಸ್ಕೃತ ಶ್ಲೋಕಗಳನ್ನು ಹೇಳುವಾಗ ಅದರ ಅರ್ಥವನ್ನೋ ಭಾವವನ್ನೋ ಬಿಡಿಸಿ ಹೇಳಿದರೆ ಅರ್ಥದ ಘನತೆ ಹೆಚ್ಚುತ್ತದೆ.

***5. ವಾದಗಳು ಸಂವಾದವಾಗಿರಬೇಕೇ ಹೊರತು ವಿವಾದಕ್ಕೆ ತಿರುಗಬಾರದು.*** ಇಂಥಹ ಸಂದರ್ಭ ಬಂದಾಗ, ಕೂಡಲೇ ಮುಂದಿನ ಪದ್ಯಕ್ಕೆ "ಎತ್ತುಗಡೆ ಕೊಡುವುದು" ಜಾಣತನವಾಗುತ್ತದೆ. ವಾದ ಮಾಡುವಾಗ ಉದಾಹರಣೆ ಅಥವಾ ಆಧಾರ ಕೊಟ್ಟರೆ ಮಾತ್ರ ಸಂಭಾಷಣೆ ಚೆನ್ನಾಗಿರುತ್ತದೆ. ವಾದ ಮಾಡುವಾಗ, ರಸ, ಕವಿಯ ಆಶಯ, ಸಂದರ್ಭ ಮುಂತಾದ ವಿಷಯ ಗ್ರಹಿಸಿ ಮಾಡುವ ವಾದಗಳು ಅರ್ಥಗಾರಿಕೆಯ ಸೊಬಗು ಹೆಚ್ಚಿಸುತ್ತದೆ. "ಹವ್ಯಾಸಿ ಅರ್ಥಧಾರಿಗಳು ಉದ್ದ ಮಾತಾಡುವುದನ್ನು ಪ್ರೇಕ್ಷಕರು ಬಯಸಲಾರರು". (ವೃತ್ತಿಪರರಿಗೂ ಇದು ಅನ್ವಯ) ವಾದ ಮಾಡುವಾಗ ಪ್ರಸಂಗದ ಪದ್ಯಗಳ ನಡೆಯಲ್ಲೇ ಇರಬೇಕು ಎಂಬುದು ಅಲಿಖಿತ ನಿಯಮ. ಅದೇ ರೀತಿ ವಾದ ಮಾಡುವಾಗ ತಾನು ನಿರ್ವಹಿಸುವ ಪಾತ್ರದ ಸ್ವಭಾವ ತಿಳಿದಿರಬೇಕಾದುದು ಅಗತ್ಯ. ಉದಾಹರಣೆಗೆ, "ಭೀಷ್ಮವಿಜಯ" ಪ್ರಸಂಗದಲ್ಲಿ ಬರುವ ಅಂಬೆ ಅಥವಾ ಏಕಲವ್ಯ ಭೀಷ್ಮನಲ್ಲಿ ಧರ್ಮಸೂಕ್ಷ್ಮತೆಯ ಬಗ್ಗೆ ಹೆಚ್ಚು ವಾದ ಮಾಡಬಾರದು. ಮುಂದಕ್ಕೆ ಪರಶುರಾಮರು ಕೇಳುವ ಪ್ರಶ್ನೆಯನ್ನು ಅಂಬೆಯೋ, ಕಾಡಕಿರಾತನೋ ಕೇಳುವುದು ಆಭಾಸವಾಗುತ್ತದೆ .ಇಂಥಹ ವಿಚಾರಗಳು ಹವ್ಯಾಸಿ ಕಲಾವಿದರಿಗೆ ತಿಳಿದಿರಬೇಕು.

***6. ಹವ್ಯಾಸಿ ಅರ್ಥಧಾರಿಗಳು ಎದುರು ಅರ್ಥಧಾರಿಗಳ ಕುರಿತು ಗೌರವ ತಾಳಬೇಕು.*** ಎದುರಿನ ಅರ್ಥಧಾರಿ ತನಗೆ ಸಮವಲ್ಲ ಎಂಬ ಮನೋಭಾವ ತಾಳುವುದು ಸರ್ವಥಾ ಸಲ್ಲದು. ಇದರಿಂದ ನಮ್ಮ ಪಾತ್ರಗಳು ಹಾಳಾಗಿ ಕೂಟ ಕೆಡುತ್ತವ. ಅದೇ ರೀತಿ ಕಥೆಯ ಆವರಣದೊಳಗೇ ಸಂವಾದ ಇರಬೇಕು. ಎದುರಿನ ಕಲಾವಿದರು ಎಷ್ಟೇ ದೊಡ್ಡವರಾದರೂ, (ಬೇಕಾದರೆ ಅವರು ಸುಪ್ರಸಿದ್ಧ ವೃತ್ತಿಪರರೇ ಇರಲಿ) ನಮಗೆ ಗೊತ್ತಿರುವ ಕಥೆ ಆ ಪ್ರಸಂಗದ ಮಿತಿಯಲ್ಲೇ ಇದ್ದರೆ, ಅಷ್ಟನ್ನೂ ಹೇಳಬೇಕು. ಈ ಕುರಿತು ಕೀಳರಿಮೆ ಇರಕೂಡದು.

***7. ವಿತಂಡವಾದ:*** ಕೆಲವು ಸಂದರ್ಭಗಳಲ್ಲಿ ವಿತಂಡವಾದವನ್ನು ಪಾತ್ರ ಪೋಷಣೆಗಾಗಿ ಮಾಡಬೇಕಾಗುತ್ತದೆ. ಆದರೆ ಇದನ್ನು ಪಾತ್ರಗಳ "ಸ್ವಗತ"ಕ್ಕೆ ಮಾತ್ರ

ಮಾಡಬೇಕೇ ಹೊರತು ವಾದಗಳಿಗೆ ಇದನ್ನು ಹೆಚ್ಚು ಎಳೆಯಬಾರದು. ಉದಾಹರಣೆಗೆ "ದಕ್ಷಾಧ್ವರ" ಪ್ರಸಂಗದಲ್ಲಿ ಈಶ್ವರನನ್ನು ದಕ್ಷನು ಸ್ವಗತದಲ್ಲಿ ಹೀಗಳೆಯಬಹುದು. ಆದರೆ ವೀರಭದ್ರನೊಂದಿಗಿನ ಯುದ್ಧದಲ್ಲಿ ವಾದ ಮಾಡುವಾಗ, ಶಿವನನ್ನು ಆಕ್ಷೇಪಿಸುವಾಗ ಪಾತ್ರದ ಘನತೆ ಉಳಿಸಿ ವಾದ ಮಾಡಬೇಕು. ಅದೇ ರೀತಿಯಲ್ಲಿ ಕೌರವ, ರಾವಣನ ಪೀಠಿಕೆ ಇತ್ಯಾದಿ. ಉತ್ತರಕುಮಾರ, ಪೌಂಡ್ರಕ, ಕೌರವ, ರುಕ್ಮಿ, ಕಂದರ, ಮಂಥರೆ ಮುಂತಾದ ಪಾತ್ರಗಳಲ್ಲಿ ಸಮಯೋಚಿತವಾಗಿ ವಿತಂಡವಾದ ಮಾಡುವ ಅವಕಾಶವಿದೆ. ಆದರೆ, ಇದು ಹಿತಮಿತವಾಗಿದ್ದರೆ ಸೊಗಸು. ಶ್ರೀರಾಮ, ನಳ, ಹರಿಶ್ಚಂದ್ರ, ಋತುಪರ್ಣ ಮುಂತಾದ ಪಾತ್ರಗಳನ್ನು ನಿರ್ವಹಿಸುವಾಗ "ವಿತಂಡವಾದ" ಮಾಡಲೇಬಾರದು. ಇದು ಪಾತ್ರಗಳ ಘನತೆ ಕುಗ್ಗಿಸುತ್ತದೆ.

***8. ಪ್ರಸಂಗದಲ್ಲಿಯ ಪದ್ಯಗಳ ಜ್ಞಾನ:*** ಅರ್ಥ ಹೇಳುವಾಗ, ಅರ್ಥಧಾರಿಯು ತನ್ನ ಪಾತ್ರಗಳಿಗೆ ಇರುವ ಪದ್ಯಗಳ ಕುರಿತು ಖಚಿತ ಜ್ಞಾನ ಹೊಂದಿರಬೇಕು. ಕೆಲವು ಪಾತ್ರಗಳಿಗೆ, ಪ್ರಸಂಗದಲ್ಲಿ ಒಂದೇ ಸಂದರ್ಭದ ನಾಲ್ಕೈದು ಪದ್ಯಗಳಿರುತ್ತವೆ . ಆದರೆ, ಭಾಗವತರು, ಸಮಯದ ಹೊಂದಾಣಿಕೆಗಾಗಿ ಕೆಲವು ಪದ್ಯಗಳನ್ನು ಬಿಡುತ್ತಾರೆ. ಆದರೆ, ಅರ್ಥಧಾರಿಗಳು, ಭಾಗವತರು ಕೈಬಿಟ್ಟ ಪದ್ಯಗಳ ಅರ್ಥವನ್ನು, ಮುಂದಿನ ಅಥವಾ ಹಿಂದಿನ ಪದ್ಯಗಳಿಗೆ ಅನ್ವಯಿಸಿ ಅರ್ಥ ಹೇಳಲೇಬೇಕು. ಮುಂದಿನ ಪದ್ಯಕ್ಕಾಗಿ ಇರುವ ಅರ್ಥವನ್ನು ಮೊದಲಿನ ಪದ್ಯದ ಅರ್ಥದಲ್ಲಿ ಬಾರದ ಹಾಗೆ ವಿವೇಚನೆ ಇರಬೇಕು .ಇಲ್ಲದಿದ್ದಲ್ಲಿ ಪುನರಾವರ್ತನೆ ಆಗುತ್ತದೆ. "ಅರ್ಥಗಾರಿಕೆಯಲ್ಲಿ ಪುನರಾವರ್ತನೆ ಆಗುವುದು ದೋಷ". ಕೆಲವೊಮ್ಮೆ ಪ್ರಸಂಗದ ಒಂದು ಸನ್ನಿವೇಶವನ್ನೋ ಅಥವಾ ಒಂದು ಪಾತ್ರವನ್ನೋ ಕೈ ಬಿಡುತ್ತಾರೆ. ಹಾಗಾದಾಗ, ಅರ್ಥಧಾರಿಯು ಆ ಸನ್ನಿವೇಶವನ್ನು ಸಂದರ್ಭಕ್ಕನುಸಾರವಾಗಿ ತನ್ನ ಅರ್ಥದಲ್ಲೇ ತುಂಬಿಸಿಕೊಳ್ಳಬೇಕು.

***9. ಕಾಲಪ್ರಜ್ಞೆ:*** ಅರ್ಥ ಹೇಳುವಾಗ, ತಾನು ನಿರ್ವಹಿಸುವ ಪಾತ್ರದ ಕಾಲಮಾನದ ಬಗ್ಗೆ ತಿಳಿದಿರಬೇಕು. ರಾಮಾಯಣದ ಪ್ರಸಂಗಗಳಲ್ಲಿ ಮಹಾಭಾರತದ ವಿಷಯಗಳು ಬಾರದಂತೆ ಜಾಗೃತೆ ವಹಿಸಬೇಕು. ಅದೇ ರೀತಿ ಯಾವ ಪಾತ್ರಗಳು ಮೊದಲಿನವು, ಯಾವುದು ನಂತರದವು ಎಂಬ ಜ್ಞಾನ ಇರಬೇಕು. "ವಾಮನ ಚರಿತ್ರೆ"ಯ ಬಲಿಯ ಪಾತ್ರ ಮಾಡಿ ರಾಮ–ಕೃಷ್ಣರ ಉದಾಹರಣೆ ಕೊಡುವುದೋ, ಹಿರಣ್ಯಕಶಿಪುವಾಗಿ ರಾವಣನನ್ನು ಉಲ್ಲೇಖಿಸುವುದೋ "ಕಾಲಬಾಧಿತ" ಎನಿಸಿಕೊಳ್ಳುತ್ತದೆ. ತಾನು ನಿರ್ವಹಿಸುವ ಪಾತ್ರದ ಬಗ್ಗೆ ಪೂರ್ವತಯಾರಿಯೊಂದಿಗೆ ಅರ್ಥ ಹೇಳಬೇಕು.



ಎಂ.ಶಾಂತರಾಮ ಕುಡ್ವ

***10. ಕನ್ನಡ ಭಾಷೆಯಲ್ಲಿ ಅರ್ಥ ಹೇಳುವಾಗ ಸಂಸ್ಕೃತ ಹೊರತು ಪಡಿಸಿ ಅನ್ಯಭಾಷೆಗಳ ಪದಪ್ರಯೋಗ ಮಾಡಲೇಕೂಡದು.*** ಅರ್ಥಧಾರಿಗಳಾಗಬೇಕಾದರೆ ಭಾಷಾಜ್ಞಾನ ಅತೀ ಅವಶ್ಯಕ .ಅನ್ಯಭಾಷೆಯ ಪದಗಳು ಅರ್ಥದಲ್ಲಿ ನುಸುಳದಂತೆ ಜಾಗರೂಕತೆ ವಹಿಸಬೇಕು ಸಂಸ್ಕೃತದ ಶಬ್ದಗಳು ಯಾವುದೇ ಭಾಷೆಯ ಅರ್ಥಗಾರಿಕೆಯಲ್ಲಿ ಸ್ವೀಕಾರಾರ್ಹ. ಅರ್ಥ ಹೇಳುವಾಗ ಮೇಲಿನ ಅಂಶಗಳಲ್ಲದೇ ಪಾತ್ರಕ್ಕನುಸಾರವಾಗಿ ಬಳಸುವ ಸ್ವರಭಾರ, ವಿವಿಧ ಪೌರಾಣಿಕ ಆಕರಗಳ ಬಳಕೆ, ಸಮಕಾಲೀನ ಸಾಹಿತ್ಯಗಳ ಜ್ಞಾನ, ಒಗಟು, ಗಾದೆ, ಸುಭಾಷಿತಗಳನ್ನು ಅಳವಡಿಸುವಿಕೆ ಮುಂತಾದವುಗಳು ಮೇಳೈಸಿದರೆ, ಅರ್ಥಗಾರಿಕೆಯು ಅರ್ಥಪೂರ್ಣವಾಗುತ್ತದೆ

## ಚೆಂಡೆಯ ಮಾಂತ್ರಿಕ – ರಾಮಕೃಷ್ಣ ಮಂದಾರ್ತಿ




**ಭಾ**ಗವತರು ಮತ್ತು ಕಲಾವಿದರ ಮಟ್ಟದಲ್ಲಿ ವಾದನಗಾರರು ಗುರುತಿಸಲ್ಪಡುವುದಿಲ್ಲ ಎಂದು ವಾದನಗಾರರ ಅಳಲಿದ್ದ ಸುಮಾರು ಎಪ್ಪತ್ತು–ಎಂಬತ್ತರ ದಶಕದಲ್ಲಿ ವಾದನಗಾರರು ಗುರುತಿಸಲ್ಪಡುವಂತೆ ಮಾಡುವಲ್ಲಿ ಬಡಗುತಿಟ್ಟಿನಲ್ಲಿ ಗಣನೀಯ ಸಾಧನೆ ಮಾಡಿದ ಕೆಮ್ಮಣ್ಣು ಆನಂದ ಹೊಳೆಗದ್ದೆ ಗಜಾನನ, ಹುಂಚದಕಟ್ಟೆ ಶ್ರೀನಿವಾಸ ಆಚಾರ್, ಬೇಳಂಜೆ ತಿಮ್ಮಪ್ಪ ನಾಯಕ್, ದುರ್ಗಪ್ಪ ಗುಡಿಗಾರ್, ಶಂಕರ ಭಾಗವತ, ಕರ್ಕಿ ಪ್ರಭಾಕರ ಭಂಡಾರಿ. ಗಜಾನನ ದೇವಾಡಿಗ ಮುಂತಾದ ಖ್ಯಾತ ನಾಮ ವಾದನಗಾರರೊಂದಿಗೆ ಕೇಳಿ ಬರುವ ಇನ್ನೊಂದು ಹೆಸರು ರಾಮಕೃಷ್ಣ ಮಂದಾರ್ತಿಯವರದ್ದು. ಬಡಗುತಿಟ್ಟಿನ ಚಂಡೆಯ ಮಾಂತ್ರಿಕ ಕೆಮ್ಮಣ್ಣು ಆನಂದರು ನಿಧನರಾದ ನಂತರ ಆ ಸ್ಥಾನವನ್ನು ಸಮರ್ಥವಾಗಿ ತುಂಬಿದವರು ಮಂದಾರ್ತಿಯವರು. ಸದ್ಯ ವೃತ್ತಿಯಿಂದ ನಿವೃತ್ತಿಯಾದ ಅವರು ದಾಸದ್ವಯರು ಮರಿಯಪ್ಪಾಚಾರ್, ಗುಂಡ್ಮಿ ಕಾಳಿಂಗ ನಾವಡರಿಂದ ಇಂದಿನ ಎಲ್ಲಾ ಯುವ ಭಾಗವತರಿಗೆ ಸಾಥ್ ನೀಡಿ ಮೂರೂ ತಲೆಮಾರಿನ ಭಾಗವತರುಗಳಿಗೆ ಚೆಂಡೆಯ ಸಾಥ್ ನೀಡಿ ಚಿಟ್ಟಾಣಿ ರಾಮಚಂದ್ರ ಹೆಗಡೆ, ಜಲವಳ್ಳಿ ವೆಂಕಟೇಶ ರಾವ್, ಶಿರಿಯಾರ ಮಂಜು ನಾಯ್ಕ್ ಐರೋಡಿ ಗೋವಿಂದಪ್ಪ ತೀರ್ಥಳ್ಳಿ ಗೋಪಾಲಾಚಾರ್, ಬಳ್ಕೂರು ಕೃಷ್ಣ ಯಾಜಿ ಸಹಿತ ಮೂರೂ ತಲೆಮಾರಿನ ಕಲಾವಿದರನ್ನು ತನ್ನ ಚೆಂಡೆಯ ನಿನಾದದಿಂದ ಕುಣಿಸಿದವರು.

ಬಡಗುತಿಟ್ಟು ಯಕ್ಷಗಾನದ ತವರೂರು ಶ್ರೀ ದುರ್ಗಾಪರಮೇಶ್ವರಿಯ ನೆಲೆವೂರಾದ ಶ್ರೀ ಕ್ಷೇತ್ರ ಮಂದಾರ್ತಿಯಲ್ಲಿ 1960ರಲ್ಲಿ ಪದ್ಮನಾಭಯ್ಯ–ರಾಧಾ ಬಾಯಿ ದಂಪತಿಗಳ ಮಗನಾಗಿ ಜನಿಸಿದ ಇವರು ಚಂಡೆಯ ಜನಕ ದಿ.ಕಮ್ಮಣ್ಣು ಆನಂದರಿಂದ ಪ್ರಾಥಮಿಕ ವಾದನ ಅಭ್ಯಾಸ ಮಾಡಿ ಶ್ರುತಿ ಬ್ರಹ್ಮ ಸುರಗಿಕಟ್ಟೆ ಬಸವಗಾಣಿಗರಿಂದ ಶ್ರುತಿ ಲಯಗಳ ಅನುಭವ ಪಡೆದು ಶ್ರೀ ಮಂದಾರ್ತಿ ಮೇಳದಲ್ಲಿ ಪ್ರಥಮವಾಗಿ ಚೆಂಡೆಯ ಕೋಲು ಹಿಡಿದರು. ಎಂಟು ವರ್ಷ ತವರು ಮೇಳ ಮಂದಾರ್ತಿಯಲ್ಲಿ, ಏಳು ವರ್ಷ ಮಾರಣಕಟ್ಟೆ ಮೇಳದಲ್ಲಿ ತಿರುಗಾಟ ಮಾಡಿದ ಇವರ ಗರಿಷ್ಠ ತಿರುಗಾಟ ಶ್ರೀ ಸಾಲಿಗ್ರಾಮ ಮೇಳದಲ್ಲಿ, ಅದೂ ಕಾಳಿಂಗ ನಾವಡರ ಸಹವರ್ತಿಯಾಗಿ. ಅಲ್ಲಿ ಕೆಮ್ಮಣ್ಣು ಆನಂದ, ಹುಂಚದಕಟ್ಟೆ ಶ್ರೀನಿವಾಸ ಆಚಾರ್, ಮರವಂತೆ ದಾಸರಿಂದ ತೆರವಾದ ಸ್ಥಾನವನ್ನು ಸಮರ್ಥವಾಗಿ ತುಂಬಿದವರು ಕಾಳಿಂಗ ನಾವಡರು, ಶಂಕರ ಭಾಗವತ ಎಲ್ಲಾಪುರ ಮತ್ತು ರಾಮಕೃಷ್ಣ ಮಂದಾರ್ತಿಯವರು. ಹತ್ತು ವರ್ಷಗಳ ಕಾಲ ಪ್ರಭಾಕರ ಭಂಡಾರಿಯವರ ಮದ್ದಳೆಗೆ ಇವರ ಚೆಂಡೆ ಸಾಲಿಗ್ರಾಮ ಮೇಳದಲ್ಲಿ ಘನ ಗಂಬೀರದ ಬ್ರಹ್ಮ ಹಿಮ್ಮೇಳವಾಗಿತ್ತು. ಅಗ್ರ ಶ್ರೇಣಿಯ ಹಿಮ್ಮೇಳ ಮುಮ್ಮೇಳದೊಂದಿಗೆ

ಪಳಗಿದ ಇವರು ತನ್ನ ವಿದ್ವತ್ ಶೀಲ ಚೆಂಡೆವಾದನದಿಂದ ವಿದ್ಯುತ್ ಸಂಚಾರ ಮಾಡಬಲ್ಲ ನವಿರಾದ ನುಡಿಗಾರಿಕೆಯಲ್ಲಿ ಭಾಗವತರ ಗಾನಾನುವರ್ತಿಯಾಗಿ ಚೆಂಡೆಯ ಸಾಥ್ ನೀಡುವ ಕಲಾವಿದರಾಗಿ ಗುರುತಿಸಿಕೊಳ್ಳಲು ಹೆಚ್ಚು ಸಮಯ ಬೇಕಾಗಲಿಲ್ಲ. ಪಾತ್ರಾನುಗುಣವಾಗಿ ವ್ಯಕ್ತಿಗೆ ನಿಷ್ಪರಾಗಿ ಕಲಾವಿದರನ್ನು ಮೆರೆಸುವ ಅನುಭವಿ ಚೆಂಡೆ ವಾದಕರಾಗಿ ಅತಿ ಬೇಗನೆ ಗುರುತಿಸಿಕೊಂಡರು. ಏಳು ಚಂಡೆಗಳನ್ನು ಶ್ರುತಿಯ ಏರಿಳಿತಕ್ಕೆ ಹೊಂದಿಸಿಕೊಂಡು ಏಕ ಕಾಲದಲ್ಲಿ ಬಾರಿಸಿದ ಖ್ಯಾತಿ ಇವರದ್ದು. ಸಪ್ತ ಚಂಡೆಗಳಲ್ಲಿ ದಾಖಲಾರ್ಹ ಸಾಧನೆ ಇವರದ್ದು.

ಕುಂದಾಪುರ ಆಡು ಮಾತಿನಂತೆ "ಆಟಕ್ಕೆ ಅಬ್ರ–ತೋಟಕ್ಕೆ ಗೊಬ್ರ" ಎಂಬಂತೆ ಬಡಗಿನ ಹಿಮ್ಮೇಳಕ್ಕೊಂದು ಅಬ್ಬರ ನೀಡಿದ ಚೆಂಡೆ ವಾದಕರಿವರು. ಬಹುದೂರದಲ್ಲಿದ್ದರೂ ಇದು ರಾಮಕೃಷ್ಣರ ಚಂಡೆವಾದನವೆಂದು ಯಕ್ಷಗಾನದ ಅಲ್ಪ ಜ್ಞಾನವಿರುವವರೂ ಕೂಡ ಗುರುತಿಸುವಂತಹ ಪರಿಪೂರ್ಣ ನುಡಿತ ಇವರದ್ದು. ಚೆಂಡೆ ಸ್ವತಂತ್ರ ವಾದನವಲ, ಚೆಂಡೆ ನಾಟ್ಯಕ್ಕೆ ಉತ್ಸಾಹ ನೀಡಿದರೂ ಅದಕ್ಕೆ ನಾದ ಮಾಧುರ್ಯ ಬರುವುದು, ಬಿಗಿತ ಸಿಗುವುದು ಮದ್ದಳೆಯ ಪೆಟ್ಟಿನೊಂದಿಗೆ ಸೇರಿಕೊಂಡಾಗ ಮಾತ್ರ. ಆಗ ಅಲ್ಲಿಒಂದು ಶ್ರುತಿ ಸಾಮರಸ್ಯದ ಗುಂಗು ಏರ್ಪಡುತ್ತದೆ, ಕೇವಲ ಬಡಿಯುವುದೇ ವಾದನವಲ್ಲ ಎಂಬ ಅಂಶಗಳ ಬಗ್ಗೆ ಸಂಪೂರ್ಣ ಅರಿವಿದ್ದ ಇವರದ್ದು ಮದ್ದಳೆಯ ನಾದಕ್ಕನುಗುಣವಾಗಿ ನುಡಿಸುವ ಪರಿಪೂರ್ಣ ವಾದನ. ನಯ ನಾಜೂಕಿನ ಪೆಟ್ಟು, ದಸ್ತನ್ನೇ ಧ್ವನಿಸುವ ನುಡಿತ, ಪದ್ಯ ಸಾಹಿತ್ಯ ಕೇಳುವಂತೆ ಚೆಂಡೆ ನುಡಿಸುವ ಕುಶಲತೆ, ಸಿಂಗಲ್ ಮತ್ತು ಡಬ್ಬಲ್ ಪೆಟ್ಟುಗಳನ್ನರಿತ ಅಪರೂಪದ ಕಲಾವಿದರಿವರು. ಏರು ಚಂಡೆಯ ಗಿಮಿಕ್ಸ್ ನಿಂದ ಬೆಳಗ್ಗಿನ ಜಾವದಲ್ಲಿ ಮಲಗಿದ ಪ್ರೇಕ್ಷಕರನ್ನು ಬಡಿದೆಬ್ಬಿಸಬಲ್ಲ ಚಾಕಚಕ್ಯತೆ ಇವರ ಚೆಂಡೆ ವಾದನದಲ್ಲಿಇದೆ. ಶ್ರುತಿ ಇಳಿಸಿದಾಗ ಚೆಂಡೆಯ ನಾದ ಕಡಿಮೆ ಆದರೂ ಸಹ ಇಳಿ ಶ್ರುತಿಯ ಭಾಗವತರಿಗೆ ಬಾರಿಸುವಾಗಲೂ, ಕರುಣಾ ರಸದ ಪದ್ಯಗಳಿಗೆ ಬಾರಿಸುವಾಗಲೂ ಇವರ ಚಂಡೆಯಲ್ಲಿ ಹೊಸದೊಂದು ನಾದಲೋಕ ಸೃಷ್ಟಿಯಾಗುತ್ತದೆ. ಸ್ವತಹ ಚೆಂಡೆಯ ಮುಚ್ಚಿಗೆ ಮಾಡಲು ತಿಳಿದಿರುವ ಇವರು ಚಂಡೆಯ ಒಳಹೊರಗನ್ನು ತಿಳಿದ ಪರಿಪೂರ್ಣ ವಾದಕರು. ಈ ತಲೆಮಾರಿನ ಕಲಾವಿದರಲ್ಲಿ ಇವರೊಂದಿಗೆ ಪಳಗಿದ ಕೋಟ ಶಿವಾನಂದ, ಹಳ್ಳಾಡಿ ರಾಕೇಶ ಮಲ್ಯ, ಕಾಡೂರು ರವಿ ಆಚಾರ್ಯರಲ್ಲಿ ಇವರ ವಾದನ ಶೈಲಿಯನ್ನು ಗುರುತಿಸಬಹುದಾಗಿದೆ. ನಿತ್ಯದ ಬದುಕಿನಲ್ಲಿ ವೃತ್ತಿ ಜೀವನದಲ್ಲಿ ಶಿಸ್ತು ಸಮಯ ಪ್ರಜ್ಞೆ, ಸರಳತೆಗಳನ್ನು ಅಳವಡಿಸಿಕೊಂಡು ಕಲಾಜೀವನದಲ್ಲಿಅಜಾತಶತ್ರುವಾಗಿ ಮೆರೆದ ಇವರು ಎಂದೂ ಸಹ ಒಪ್ಪಿದ ಕಾರ್ಯಕ್ರಮಕ್ಕೆ ಗೈರು ಹಾಜರಾದವರಲ. ಸದ್ಯ ಶ್ರೀ ಕ್ಷೇತ್ರ ಮಂದಾರ್ತಿಯಲ್ಲಿ ಹಣ್ಣು ಕಾಯಿ ಅಂಗಡಿ ನೆಡೆಸುತ್ತಿರುವ ಇವರಿಗೆ ವೃತ್ತಿ ಜೀವನದಲ್ಲಿ, ಉಡುಪಿ ಯಕ್ಷಗಾನ ಕಲಾಕ್ಷೇತ್ರದ ನಿಟ್ಟೂರು ಭೋಜಪ್ಪ ಸುವರ್ಣ ಪ್ರಶತಿ, ಪಳ್ಳಿ ಸೋಮನಾಥ ಹೆಗ್ದೆ ಪ್ರಶಸ್ತಿ ಸಹಿತ ಹಲವಾರು ಸನ್ಮಾನಗಳು ಸಂದಿವೆ.



**ಪ್ರೋ.ಎಸ್.ವಿ.ಉದಯ ಕುಮಾರ ಶೆಟ್ಟಿ**

---

## ಧೀರ ಕಲೆಯೊಳಗೆ ಕೀರವಾಣಿಯರು – ೧೧

### ಯಕ್ಷಗಾನ ಮೇಳದ ಯಜಮಾನಿಕೆಯುಳ್ಳ ಕಲಾವಿದೆ – ಶ್ರೀಮತಿ ಯೋಗಾಕ್ಷಿ ಗಣೇಶ್ ತಲಕಳ

*ಯಕ್ಷಗಾನದ ವಿವಿಧ ವಿಭಾಗಗಳಲ್ಲಿ ತೊಡಗಿಸಿಕೊಂಡು ಗಂಡಿಗೆ ಸಮನಾಗಿ ತಮ್ಮ ಪ್ರತಿಭಾ ಪ್ರಭೆಯನ್ನು ಬೆಳಗುತ್ತಿರುವ ಯಕ್ಷಗಾನ ಕಲೆಯ ಮಹಿಳಾಮಣಿಗಳಿಗೆ* ***ಮಹಿಳಾ ದಿನಾಚರಣೆಯ ಹಾರ್ದಿಕ ಶುಭಾಶಯಗಳು****. ಮಹಿಳಾ ದಿನಾಚರಣೆಯ ವಿಶೇಷವಾಗಿ, ವೃತ್ತಿಪರ ಮೇಳವನ್ನು ಮುನ್ನಡೆಸುತ್ತಿರುವ ದಿಟ್ಟ ಮಹಿಳೆ ಹಾಗೂ ಕಲಾವಿದೆಯೊಬ್ಬರ ಸಾಧನೆಯ ಪರಿಚಯ ಈ ಸಂಚಿಕೆಯಲ್ಲಿ*

ಯಕ್ಷಗಾನ ಕಲಾವಿದೆ, ಯಕ್ಷ ಶಿಕ್ಷಕಿ, ತಾಳಮದ್ದಳೆ ಅರ್ಥಧಾರಿ, ಯಕ್ಷಗಾನ ಭಾಗವತಿಕೆ ಅಭ್ಯಾಸಿ, ಶ್ರೀಶ ಯಕ್ಷಗಾನ ಕಲಿಕಾ ಕೇಂದ್ರದ ಮಕ್ಕಳ ಮೇಳದ ಸಂಚಾಲಕಿ, ಪ್ರಸ್ತುತ ಶ್ರೀಕಾಶೀ ವಿಶ್ವನಾಥೇಶ್ವರ ಮಹಾಗಣಪತಿ ಯಕ್ಷಗಾನ ಮಂಡಳಿ, ತಲಕಳದ ಯಜಮಾನಿಕೆ ಉಳ್ಳಾಕೆ, ನಾಟಕ ಕಲಾವಿದೆ. ಅಷ್ಟೇ ಅಲ್ಲದೇ ವೃತ್ತಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯಾಗಿ ಸೇವೆ ಸಲ್ಲಿಸುವ ಇವರು ಶ್ರೀಮತಿ ಯೋಗಾಕ್ಷಿ ಗಣೇಶ್ ತಲಕಳ.

ಉಳ್ಳಾಲ ಮತ್ತು ತಲಕಳ ಮೇಳದ ಯಜಮಾನರಾಗಿದ್ದ, ಸ್ವತಃ ಯಕ್ಷಗಾನ ಕಲಾವಿದರಾಗಿದ್ದ ದಿ. ಕೆ.ತಿಮ್ಮಪ್ಪ ಗುಜರನ್ ಹಾಗೂ ಶ್ರೀಮತಿ ಗುಲಾಬಿ ದಂಪತಿಗಳ ಮಗಳಾಗಿ ದಿನಾಂಕ 18–07–1978 ರಲ್ಲಿ ಕೊಳಂಬೆ ಗ್ರಾಮದ ತಲಕಳದಲ್ಲಿ ಜನಿಸಿದ ಯೋಗಾಕ್ಷಿಯವರು ಬಜ್ಪೆಯಲ್ಲಿ ತಮ್ಮ ಹತ್ತನೇ ತರಗತಿವರೆಗಿನ ಶಿಕ್ಷಣವನ್ನು ಪೂರೈಸಿದರು. ತಮ್ಮ ಹದಿನಾರನೇ ವಯಸ್ಸಿನಲ್ಲಿ ದಿ. ಬಜ್ಪೆ ದೇರಣ್ಣರಲ್ಲಿ ಯಕ್ಷಗಾನದ ಆರಂಭಿಕ ಹೆಜ್ಜೆಗಾರಿಕೆಯನ್ನು ಕಲಿತು, 'ಬಪ್ಪನಾಡು ಕ್ಷೇತ್ರ ಮಹಾತ್ಮ 'ಸಪ್ತದೇವಿಯರಲ್ಲಿ ಓರ್ವಳಾಗಿ ರಂಗಪ್ರವೇಶ ಮಾಡಿದರು. ಆ ಬಳಿಕ ಬೆಳ್ಳಾರೆ ಮಂಜುನಾಥ ಭಟ್ಟರಲ್ಲಿ ಯಕ್ಷಗಾನದ ಹೆಚ್ಚಿನ ನಾಟ್ಯಾಭ್ಯಾಸ ಮಾಡಿದ ಇವರು ಇವತ್ತಿಗೂ ಕರ್ಗಲ್ಲು ವಿಶ್ವೇಶ್ವರ ಭಟ್ಟರಲ್ಲಿ ನಾಟ್ಯಾಭ್ಯಾಸವನ್ನು ಮಾಡುತ್ತಿದ್ದಾರೆ ಎನ್ನುವುದು ಕಲಿಕೆ ಯಾವತ್ತಿಗೂ ಮುಗಿಯುವಂಥದ್ದಲ್ಲ ಎಂಬುದನ್ನು ತೋರಿಸುತ್ತದೆ. ಇದು ಇವರ ಕಲಿಯುವುದಕ್ಕೆ ಬಹಳಷ್ಟಿದೆ ಎಂಬ ಮನೋಭಾವವನ್ನೂ ತೋರಿಸುತ್ತದೆ.

'ದಕ್ಷಾಧ್ವರ'ದ ದಾಕ್ಷಾಯಿಣಿ ಇವರ ಬಹಳ ಹೆಸರು ತಂದುಕೊಟ್ಟ ಪಾತ್ರ. ಈಗಿನ ಹಾಗೆ ಮಾಧ್ಯಮಗಳ ವ್ಯವಸ್ಥೆ ಆವತ್ತೂ ಇದ್ದಿದ್ದರೆ ಬಹುಶಃ ಇವರಂಥಹ ಅನೇಕ ಕಲಾವಿದರ ಪಾತ್ರದ ಪರಿಚಯ ನಮಗಾಗುತ್ತಿತ್ತೋ ಏನೋ. 'ಭಸ್ಮಾಸುರ ಮೋಹಿನಿ'ಯ ಮೋಹಿನಿ, ಸುದರ್ಶನ ವಿಜಯದ ವಿಷ್ಣು, ಲಕ್ಷ್ಮಿ ಇವುಗಳು ಇವರ ನೆಚ್ಚಿನ ಪಾತ್ರಗಳು. ಇನ್ನುಇವರುನಿರ್ವಹಿಸಿದ ಪಾತ್ರಗಳು ಅನೇಕ. ಮಾಯಾ ತಿಲೋತ್ತಮೆಯ ಬ್ರಹ್ಮ, ಶ್ರೀ ದೇವೀ ಮಹಾತ್ಮೆಯ ದೇವಿ, ಮಾಲಿನಿ, ಬ್ರಹ್ಮ, ಆದಿಮಾಯೆ, ದೇವೇಂದ್ರ, ಮುಂಡ, ಸುಗ್ರೀವ, ನಳದಮಯಂತಿಯ ದಮಯಂತಿ, ವೀರಮಣಿಯ ಈಶ್ವರ, ರುಕ್ಮಾಂಗ, ಬಭ್ರುವಾಹನ ಕಾಳಗದ ಬಭ್ರುವಾಹನ, ಚಿತ್ರಾಂಗದೆ, ರತಿಕಲ್ಯಾಣದ ರತಿ, ದ್ರೌಪದಿ, ಕುಶಲವದ ಕುಶ, ಸೀತೆ, ಭಾರ್ಗವ ವಿಜಯದ ಭಾರ್ಗವ, ಜಾಂಬವತೀ ಕಲ್ಯಾಣದ ಬಲರಾಮ, ಕೃಷ್ಣ, ಶಶಿಪ್ರಭಾ ಪರಿಣಯದ ಶಶಿಪ್ರಭೆ, ಭ್ರಮರ ಕುಂತಳೆ, ಕಮಲಗಂಧಿನಿ, ಶರಸೇತುಬಂಧನದ ಕೃಷ್ಣ, ವೃದ್ಧಬ್ರಾಹ್ಮಣ, ಹನೂಮಂತ, ಬೇಡರ ಕಣ್ಣಪ್ಪದ ಈಶ್ವರ, ಪಂಚವಟಿಯ ಮಾಯಾ ಶೂರ್ಪನಖಿ, ಸೀತೆ, ಭೀಷ್ಮ ವಿಜಯದ ಅಂಬೆ, ಭೃಗುಲಾಂಛನದ ಲಕ್ಷ್ಮಿ, ತುಳಸೀ ಜಲಂಧರದ ವೃಂದೆ, ಕೃಷ್ಣಾರ್ಜುನದ ಕೃಷ್ಣ, ಪ್ರಮೀಳಾರ್ಜುನದ ಪ್ರಮೀಳೆ, ಬಪ್ಪನಾಡು ಕ್ಷೇತ್ರ ಮಹಾತ್ಮೆಯ ರಂಭಾಮಣಿ, ರಾವಣ ವಧೆಯ ಮಂಡೋದರಿ ಇಂತಹ ವೈವಿಧ್ಯಮಯ ಪಾತ್ರಗಳ ಜೊತೆಗೆ




ಇನ್ನೂ ಅನೇಕ ಪಾತ್ರಗಳನ್ನು ಇವರು ನಿರ್ವಹಿಸಿದ್ದಾರೆ. ತಮ್ಮ ಮೇಳದ ಯಕ್ಷಗಾನಗಳಲ್ಲಿಯೂ ಕನ್ನಡ-ತುಳು ಪ್ರಸಂಗಗಳಲ್ಲಿಯೂ ಅನೇಕ ಪಾತ್ರಗಳನ್ನು ನಿರ್ವಹಿಸಿದ ಸುಮಾರು 29 ವರ್ಷಗಳ ಅನುಭವ ಇವರದ್ದು. ಅನೇಕ ಯಕ್ಷಗಾನ ತಾಳಮದ್ದಳೆಗಳಲ್ಲಿಯೂ ಪ್ರಧಾನ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಶ್ರೀಮತಿ ಲೀಲಾವತಿ ಬೈಪಾಡಿತ್ತಾಯರಲ್ಲಿ ಯಕ್ಷಗಾನ ಭಾಗವತಿಕೆಯ ಅಭ್ಯಾಸವನ್ನೂಇವರು ಮಾಡಿದ್ದಾರೆ. ಇವರ ತಂದೆಯ ವ್ಯವಸ್ಥಾಪಕತ್ವದ ಶ್ರೀ ತಲಕಳ ಮೇಳದಲ್ಲಿ ಮೂರು ವರ್ಷ, ಶ್ರೀ ಉಳ್ಳಾಲ ಮೇಳದಲ್ಲಿ ಹತ್ತು ವರ್ಷಕ್ಕೂ ಮಿಕ್ಕಿ ಸಂಗೀತಗಾರಳಾಗಿ ಸೇವೆ ಸಲ್ಲಿಸಿದ್ದಾರೆ. ತಂದೆಯ ಮರಣಾ ನಂತರ 2021 ರಿಂದ ಆರಂಭದಲ್ಲಿ ತಲಕಳ ಮತ್ತು ಉಳ್ಳಾಲ ಮೇಳಗಳೆರಡನ್ನೂ ಇವರೇ ನೋಡಿಕೊಳ್ಳುತ್ತಿದ್ದರು. ಮರು ವರ್ಷದಿಂದ ತಲಕಳ ಮೇಳ ಒಂದನ್ನು ತಮ್ಮ ವ್ಯವಸ್ಥಾಪಕತ್ವದಲ್ಲಿ ನಿಭಾಯಿಸುತ್ತಿದ್ದಾರೆ. ತಮ್ಮ ತಮ್ಮನಾದ ದಿವಂಗತ ಶ್ರೀಶ ತಲಕಳರ ನೆನಪಿನಲ್ಲಿ "ಶ್ರೀಶ ಯಕ್ಷೋತ್ಸವ"ವನ್ನು 2009 ರಿಂದ ನಿರಂತರವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ತಮ್ಮನ ಹೆಸರಿನಲ್ಲಿ ಹಾಗೂ 2020 ರಲ್ಲಿ ನಿಧನರಾದ ತಮ್ಮ ತಂದೆಯ ಹೆಸರಿನಲ್ಲೂ ಅರ್ಹ ಕಲಾವಿದರನ್ನು ಗುರುತಿಸಿ, ಸಂಮಾನಿಸುವ ಕಾರ್ಯವೂ ಈ ಯಕ್ಷೋತ್ಸವದಲ್ಲಿ ನಡೆಯುತ್ತದೆ. ತನ್ನ ತಮ್ಮನ ಹೆಸರಿನಲ್ಲೇ ಶ್ರೀಶ ಯಕ್ಷಗಾನ ಕಲಿಕಾ ಕೇಂದ್ರವನ್ನೂ ಸ್ಥಾಪಿಸಿ, ಅನೇಕ ವಿದ್ಯಾರ್ಥಿಗಳಿಗೆ ಯಕ್ಷಗಾನವನ್ನು ಉಚಿತವಾಗಿ ಕಲಿಸುವ ಹೊಣೆ ಹೊತ್ತವರಿವರು. ಇಲ್ಲಿ ಪ್ರಸ್ತುತ ಕರ್ಗಲ್ಲು ವಿಶ್ವೇಶ್ವರ ಭಟ್ಟರು ಗುರುಗಳು. ಹಿಮ್ಮೇಳ ವಿದ್ಯಾರ್ಥಿಗಳೂ ಇಲ್ಲಿದ್ದಾರೆ. ಬೈಪಾಡಿತ್ತಾಯ ದಂಪತಿಗಳಲ್ಲಿ ಹಿಮ್ಮೇಳ ಆಸಕ್ತರಿಗೂ ತರಗತಿ ಇಲ್ಲಿ ನಡೆಯುತ್ತದೆ. ಇಲ್ಲಿ ಕಲಿತ ಮಕ್ಕಳದ್ದೇ ಒಂದು ತಂಡವನ್ನೂ ಕಟ್ಟಿದ್ದಾರೆ. ಇದರಿಂದ ಮೊದಲು ಒಂದು ಮಹಿಳಾ ಯಕ್ಷಗಾನ ತಂಡವನ್ನೂ ಕಟ್ಟಿ, ಅನೇಕ ಪ್ರದರ್ಶನಗಳನ್ನು ಕೊಟ್ಟಿದ್ದಾರೆ. ಇವರ ಮಕ್ಕಲ ತಂಡದ ವಿಶೇಷತೆಯೆಂದರೆ, ಇಲ್ಲಿ ಹಿಮ್ಮೇಳ ಮತ್ತು ಮುಮ್ಮೇಳವನ್ನು ಮಕ್ಕಳೇ ನಿಭಾಯಿಸುತ್ತಾರೆ. ಮಕ್ಕಳೇ ಸ್ವತಃ ಮುಖವರ್ಣಿಕೆಯನ್ನೂ ಮಾಡುತ್ತಾರೆ.

2010 ರ ಶ್ರೀಶ ಯಕ್ಷೋತ್ಸವದಲ್ಲಿ ಮೊದಲ ಬಾರಿಗೆ 35 ಮಹಿಳಾ ಕಲಾವಿದೆಯರನ್ನು ಒಗ್ಗೂಡಿಸಿ, ಸಂಪೂರ್ಣ 'ಶ್ರೀ ದೇವಿ ಮಹಾತ್ಮೆ' ಯಕ್ಷಗಾನವನ್ನು ಪ್ರದರ್ಶಿಸಿದ ಹಿರಿಮೆ ಇವರದ್ದು. ಇವರ ಮಕ್ಕಳಾದ ಶ್ರಾವ್ಯ ಹಾಗೂ ಶಮಾ ಕೂಡ ಯಕ್ಷಗಾನ ಕಲಾವಿದರಾದದ್ದು ವಿಶೇಷ. ಇವರು ಎಳವೆಯಲ್ಲೇ ತಮ್ಮ ಅಜ್ಜನ ಮೇಳದಲ್ಲಿ ಪೂರ್ವರಂಗದ ವೇಷಗಳನ್ನು ಮಾಡುತ್ತಿದ್ದರು. ಈಗ ಶ್ರಾವ್ಯ ಪದವಿ ವಿದ್ಯಾರ್ಥಿ. ಯಕ್ಷಗಾನ ವೇಷಧಾರಿ, ಭಾಗವತಿಕೆ ಅಭ್ಯಾಸಿ, ಚೆಂಡೆ-ಮದ್ದಳೆ ವಾದಕಿ. ಶಮಾ ಪ್ರೌಢಶಾಲಾ ವಿದ್ಯಾರ್ಥಿ, ವೇಷಧಾರಿ, ಚೆಂಡೆ-ಮದ್ದಳೆ ವಾದಕಿ. ಯೋಗಾಕ್ಷಿಯವರು ಸ್ವತಃ ಯಕ್ಷ ಶಿಕ್ಷಕಿಯೂ ಹೌದು. ನಿರಂಜನ ಸ್ವಾಮಿ ಕಾಲೇಜು, ಚೈತನ್ಯ ಮಹಿಳಾ ಮಂಡಲ ಮುರನಗರ, ಜಿ.ಎಸ್.ಬಿ ಸಂಘ ಬಜ್ಪೆಯಲ್ಲಿ ಯಕ್ಷಗಾನ ಕಲಿಸಿದವರು.





ಸಾಯಿಸುಮಾ ಎಂ. ನಾವಡ

ಇವಿಷ್ಟೇ ಅಲ್ಲದೇ ಯೋಗಾಕ್ಷಿಯವರು ನಾಟಕರಂಗದಲ್ಲೂ ತೊಡಗಿಸಿಕೊಂಡವರು. ಇವರ ನಾಟಕ ರಂಗದ ಗುರುಗಳು ನಿರಂಜನ್ ಸಾಲಿಯಾನ್ ಕದ್ರಿ, ನಾಗೇಶ್ ದೇವಾಡಿಗ ಕದ್ರಿ. ಕದ್ರಿ ನವನೀತ ಶೆಟ್ಟಿ ವಿರಚಿತ "ಸತ್ಯೊದಸಿರಿ"ಯ ದಾರುಪಾತ್ರ ಇವರಿಗೆ ನೆಚ್ಚಿನದ್ದು. ಅಷ್ಟೇ ಅಲ್ಲದೇ ಮಹಿಳಾ ತಂಡದೊಂದಿಗೆ ಸಮೂಹ ಜಾನಪದ ನೃತ್ಯಗಳನ್ನು ಜಿಲೆಯಾದ್ಯಂತ ಪ್ರದರ್ಶಿಸಿದ್ದಾರೆ. ಮಹಿಳಾ ಮಂಡಲಗಳಲ್ಲಿಯೂ ಇವರು ಸಕ್ರಿಯರು. ಸುಮಾರು ಹತ್ತು ವರ್ಷಗಳ ಕಾಲ ಮಕ್ಕಳಿಗೆ "ಬೇಸಿಗೆ ಶಿಬಿರ"ಗಳನ್ನು ಆಯೋಜಿಸಿದವರು ಇವರು. ಇಂತಹ ಸರಳ, ಸಜ್ಜನ ಮಹಿಳೆ ಯೋಗಾಕ್ಷಿಯವರಿಗೆ ಅನೇಕ ಸಂಘ-ಸಂಸ್ಥೆಗಳಲ್ಲಿಸಂಮಾನಗಳು ದೊರೆತಿವೆ. ಪಟ್ಲ ಫೌಂಡೇಶನ್ ನಿಂದಲೂ ಗೌರವಿಸಲ್ಪಟ್ಟವರು ಇವರು. ತಮ್ಮ ಪತಿ ಹಾಗೂ ಮನೆಯವರೆಲ್ಲರ ಸಹಕಾರದಿಂದ ಇಷ್ಟೆಲ್ಲಾ ಮಾಡುವುದಕ್ಕಾಯಿತು ಎನ್ನುವ ಇವರನ್ನು ಕಲಾಮಾತೆ ಇನ್ನಷ್ಟು ಹರಸಿ, ಬೆಳಗಿಸಲಿ ಎಂಬ ಆಶಯ ನಮ್ಮದು.

**ನಿಮಗಿದು ಗೊತ್ತೇ? – ಯಕ್ಷಗಾನದ ಪ್ರತಿಭಾವಂತ ಮದ್ದಳೆಗಾರ ಹಾಗೂ ಬರಹಗಾರರಾದ ಕೃಷ್ಣಪ್ರಕಾಶ್ ಉಳಿತ್ತಾಯರು ಯಕ್ಷಬ್ರಹ್ಮ ಅಗರಿ ಶ್ರೀನಿವಾಸ ಭಾಗವತರ ಕುರಿತ "ಅಗರಿ ಮಾರ್ಗ, ಗಾನ ಸುಧೆಯಲ್ಲಿ ಮಿಂದೆದ್ದು" ಎಂಬ ಕೃತಿಯನ್ನು ರಚಿಸಿದ್ದಾರೆ.**

## ಕಾಡುವ ಪಾತ್ರ/ ಪ್ರಸಂಗ/ ಸನ್ನಿವೇಶ

**ಕ**ಲಾವಿದರ ಯಕ್ಷಾನುಭವದ ಪ್ರಮುಖ ನೆನಪು/ಘಟನೆಗಳನ್ನು ದಾಖಲೀಕರಿಸುವ ಅಂಕಣ ಇದು. ಪ್ರತೀ ಸಂಚಿಕೆಯಲ್ಲಿ ಇಬ್ಬರು ಕಲಾವಿದರ ಅನುಭವಗಳನ್ನು ಇಲ್ಲಿ ಸಾದರಪಡಿಸುತ್ತಿದ್ದೇವೆ. ಈ ತಿಂಗಳ ಸಂಚಿಕೆಯಲ್ಲಿ ಬಡಗು ತಿಟ್ಟಿನ ಹಿರಿಯ ಕಲಾವಿದರಾದ **ಎಳಬೇರು ಶೇಖರ್ ಶೆಟ್ಟಿ** ಹಾಗೂ ತೆಂಕು ತಿಟ್ಟಿನ ಹಿರಿಯ ಕಲಾವಿದರಾದ **ಸಂಜಯ್ ಕುಮಾರ್ ಶೆಟ್ಟಿ ಗೋಣಿಬೀಡು** ***ರವರ*** ಅನುಭವಗಳ ತುಣುಕು ಪ್ರಕಟವಾಗಿದೆ.




**ಪ್ರ**ಸಿದ್ಧ ಯಕ್ಷಗಾನ ಕಲಾವಿದರಾದ ***ಸಂಜಯ್ ಕುಮಾರ್ ಶೆಟ್ಟಿ*** ಗೋಣಿಬೀಡುರವರು ಮೂಲತಃ ಮಂಗಳೂರಿನವರಾದರೂ ಹುಟ್ಟಿ ಬೆಳೆದದ್ದು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯಲ್ಲಿ. ಇವರ ವಿದ್ಯಾರ್ಥಿ ದೆಸೆಯಲ್ಲಿ ಬೇಸಗೆಯಲ್ಲಿ ಇವರ ಪರಿಸರದಲ್ಲಿ ತಿರುಗಾಟಕ್ಕೆಂದು ಯಕ್ಷಗಾನ ಮೇಳಗಳು ಬರುತ್ತಿದ್ದವಂತೆ. ಹಾಗೆಯೇ ಧರ್ಮಸ್ಥಳ ಮೇಳದ ಯಕ್ಷಗಾನ ಪ್ರದರ್ಶನಕ್ಕೆ ಬಂದಿದ್ದಾಗ ಪುಂಡು ವೇಷದ ಸಿಡಿಲಮರಿ ಗಂಡುಗಲಿ ಎಂದೇ ಪ್ರಸಿದ್ಧರಾದ ಶ್ರೀಧರ ಭಂಡಾರಿಯವರ ವೇಷವನ್ನು ನೋಡಿ ಇವರಿಗೆ ಯಕ್ಷಗಾನದಲ್ಲಿ ಕುತೂಹಲ ಮೂಡಿತ್ತು ಹಾಗೆ ಕಲಾವಿದ ಆಗಬೇಕು ಎನ್ನುವ ಆಸೆಯೂ ಮೂಡುತ್ತೆ. ಒಂದೊಮ್ಮೆ ಕುಂಡಾವು ಮೇಳ ಈ ಊರಿಗೆ ಪ್ರದರ್ಶನಕ್ಕೆ ಬಂದಾಗ ಸಿಡಿಲ ಮರಿ ಎಂದು ಕರೆಸಿಕೊಂಡಿದ್ದ ಮತ್ತೊಬ್ಬ ಪುಂಡು ವೇಷಧಾರಿ ಕ್ರಿಶ್ಚಿಯನ್ ಬಾಬುರವರು ಇವರ ಸಂಬಂಧಿಕರ ಮನೆಗೆ ಅತಿಥಿಯಾಗಿ ಆಗಮಿಸುತ್ತಾರೆ. ಅವರು ಈ ಯುವಕನಲ್ಲಿ ಯಕ್ಷಗಾನದ ಆಸಕ್ತಿ ಇದೆಯಾ ಎಂದು ಕೇಳಿದಾಗ ಇವರ ಆಸಕ್ತಿಗೆ ಪುಷ್ಟಿ ನೀಡಿದಂತಾಗುತ್ತದೆ. ಅದಕ್ಕುತ್ತರವಾಗಿ ಹೌದೆಂದು ತಲೆಯಾಡಿಸಿದ ಸಂಜಯ್ ಕುಮಾರ್ ರವರನ್ನು ಅವರೊಂದಿಗೆ ಊರಿಗೆ ಕರೆದುಕೊಂಡು ಬರುತ್ತಾರೆ. ನಂತರ ಧರ್ಮಸ್ಥಳ ಕಲಾಕೇಂದ್ರದಲ್ಲಿ ತರಬೇತಿಗೆ ಅರ್ಜಿ ಸಲ್ಲಿಸುತ್ತಾರೆ. ಇವರು ಅರ್ಜಿ ಸಲ್ಲಿಸುವ ಸಮಯಕ್ಕೆ ಆಯ್ಕೆ ಪ್ರಕ್ರಿಯೆ ಮುಗಿದಿರುತ್ತದೆ. ಆಗ ಖಾವಂದರನ್ನು ಭೇಟಿಯಾಗಿ ನಾನು ಶ್ರೀಧರ ಭಂಡಾರಿಯವರ ತಮ್ಮ ಎಂದು ತಿಳಿಸಿ ಯಕ್ಷಗಾನ ಕಲಿಯುವ ಆಸಕ್ತಿಯನ್ನು ಹೇಳಿಕೊಳ್ಳುತ್ತಾರೆ. ಆಗ ಶ್ರೀಧರ ಭಂಡಾರಿಯವರು ಧರ್ಮಸ್ಥಳ ಮೇಳದಲ್ಲಿ ಪ್ರಸಿದ್ಧ ವೇಷಧಾರಿಯಾಗಿದ್ದರು. ಶ್ರೀಧರ ಭಂಡಾರಿಯವರ ತಮ್ಮನರಂದು ತಿಳಿದು ಸಂಜಯ್ ಕುಮಾರ್ ರವರನ್ನು ಲಲಿತಾ ಕಲಾ ಕೇಂದ್ರದಲ್ಲಿ ನೇರವಾಗಿ ತರಬೇತಿಗೆ ಆಯ್ಕೆ ಮಾಡಿಕೊಂಡರು. ಯಕ್ಷಗಾನದ ದ್ರೋಣಾಚಾರ್ಯ ಫಡ್ರೆ ಚಂದುರವರಲ್ಲಿ ಇವರು ನಾಟ್ಯಭ್ಯಾಸವನ್ನ ಮಾಡಿದರು.

ಧರ್ಮಸ್ಥಳ ಲಲಿತಾ ಕಲಾ ಕೇಂದ್ರದಲ್ಲಿ ನಾಟ್ಯ ಕಲಿಯುತ್ತಿರುವಾಗ ಸಂಜಯ್ ಕುಮಾರ್ ರವರ ಚಿಕ್ಕಪ್ಪ ದಿ. ಶೀನಪ್ಪ ಭಂಡಾರಿಯವರು ನೋಡಿ ಅಭ್ಯಾಸ ಮುಗಿದ ಮೇಲೆ ಸುಬ್ರಹ್ಮಣ್ಯ ಮೇಳಕ್ಕೆ ಬರುವುದಕ್ಕೆ ಹೇಳುತ್ತಾರೆ. ಆಗ ದಿ. ಶೀನಪ್ಪ ಭಂಡಾರಿಯವರು ಆದಿ ಸುಬ್ರಮಣ್ಯ ಸ್ವಾಮಿ ಕೃಪಾಪೋಷಿತ ಯಕ್ಷಗಾನ ಮಂಡಳಿಯನ್ನು ನಡೆಸುತ್ತಿದ್ದರು. ಅವರ ಮೇಳದಲ್ಲಿ ಬಾಲಗೋಪಾಲನ ವೇಷಕ್ಕೆ ಸೇರಿಕೊಂಡು ನಂತರ ಪ್ರಧಾನ ಪುಂಡು ವೇಷಗಳ ನಿರ್ವಹಣೆಗೆ ಅತೀ ಬೇಗನೆ ಅವಕಾಶ ಸಿಗುತ್ತದೆ. ಮೊದಲಿಗೆ ಭಾರ್ಗವ ವಿಜಯದ ಪರಶುರಾಮ, ಚಂಡ ಮುಂಡರು, ಅಭಿಮನ್ಯು, ಅಯ್ಯಪ್ಪ, ಕೃಷ್ಣ ಮೊದಲಾದ ಪಾತ್ರಗಳನ್ನು ನಿರ್ವಹಿಸಕಲು ಅವಕಾಶ ಲಭಿಸಿತು. ನಾಲ್ಕು ವರ್ಷ ಸುಬ್ರಹ್ಮಣ್ಯ ಮೇಳದಲ್ಲಿ ತಿರುಗಾಟ ಮಾಡಿದ ಬಳಿಕ ಇವರ ಸಹೋದರ ಶ್ರೀಧರ ಭಂಡಾರಿಯವರು ಪುತ್ತೂರು ಮಹಾಲಿಂಗೇಶ್ವರ ಮೇಳ ಪ್ರಾರಂಭಿಸುತ್ತಾರೆ. ಆ ಮೇಳಕ್ಕೆ ಬರುವಂತೆ ಇವರಿಗೆ ಆಹ್ವಾನವಿರುತ್ತದೆ. ಹೀಗೆ ಪುತ್ತೂರು ಮೇಳದಲ್ಲೂ ನಾಲ್ಕು ವರ್ಷ ತಿರುಗಾಟ ನಡೆಸುತ್ತಾರೆ.

**ಕಲಾವಿದರು: ಸಂಜಯ್ ಕುಮಾರ್ ಶೆಟ್ಟಿ ಗೋಣಿಬೀಡು**
**ತಂದೆ: ಐತಪ್ಪ ಶೆಟ್ಟಿ**
**ತಾಯಿ: ಸುಂದರಿ ಶೆಟ್ಟಿ**
**ಹುಟ್ಟಿದ ದಿನಾಂಕ: ಅಕ್ಟೋಬರ್ 10 1960**
**ಹುಟ್ಟಿದ ಸ್ಥಳ: ಮೂಡಿಗೆರೆ ತಾಲೂಕಿನ ಗೋಣಿಬೀಡು**
**ಯಕ್ಷಗಾನದ ಗುರುಗಳು: ನಾಟ್ಯಕ್ಕೆ ಯಕ್ಷಗಾನದ ದ್ರೋಣಾಚಾರ್ಯ ಎಂದು ಪ್ರಖ್ಯಾತರಾಗಿದ್ದ ಫಡ್ರೆ ಚಂದುರವರು, ಸ್ತ್ರೀ ವೇಷಕ್ಕೆ ಯಕ್ಷಗಾನದ ದಂತಕಥೆ ಕೋಳ್ಯೂರು ರಾಮಚಂದ್ರ ರಾಯರು ಹಾಗೂ ಎಂಕೆ ರಮೇಶ ಆಚಾರ್**
**ಧರ್ಮಪತ್ನಿ: ಪ್ರಫುಲ್ಲ ಶೆಟ್ಟಿ**
**ಮಕ್ಕಳು: ದೀಕ್ಷಾ ದರ್ಶನ್ ದಕ್ಷಿಣ್**

***ಪ್ರ: ಪುಂಡುವೇಷದೊಂದಿಗೆ ಸ್ತ್ರೀಪಾತ್ರಗಳನ್ನು ನಿರ್ವಹಿಸುವ ಅನುಭವ ಹೇಗಿತ್ತು? ಅದಕ್ಕೆ ಸಿದ್ಧತೆ ಮತ್ತು ಎದುರಿಸಿದ ಸವಾಲುಗಳ ಬಗ್ಗೆ ಅನುಭವ ಹೇಳಿ***

**ಸಂ.ಗೋ:** ನನಗೆ ಜನಮನ್ನಣೆ ಸಿಕ್ಕಿದ್ದು ಸ್ತ್ರೀ ವೇಷದಲ್ಲಿ. ಆದರೆ 99% ನಾನು ಮನಸ್ಸಿಲ್ಲದೆ ಸ್ತ್ರೀ ವೇಷ ಮಾಡುವ ಪರಿಸ್ಥಿತಿ ಒದಗಿ ಬಂತು. ನನ್ನ ಮುಖಚರ್ಯೆ ಆಕರ್ಷಕವಾಗಿದ್ದರಿಂದ ಮತ್ತು ಮೇಳದಲ್ಲಿ ಶಬರಿಮಲೆ ಅಯ್ಯಪ್ಪ ಸ್ವಾಮಿ ಪ್ರಸಂಗದಲ್ಲಿ ಮೋಹಿನಿ ಪಾತ್ರ ಮಾಡುವುದಕ್ಕೆ ಪಾತ್ರಧಾರಿಯ ಕೊರತೆ ಇತ್ತು. ಅದರಲ್ಲಿ ನನಗೆ ಮಣಿಕಂಠನ ಪಾತ್ರ ನಿಗದಿಯಾಗಿತ್ತು. ಸ್ತ್ರೀ ವೇಷಕ್ಕೆ ಕೊರತೆ ಇದ್ದದ್ದರಿಂದ ಮೋಹಿನಿ ಪಾತ್ರವನ್ನು ನಾನು ಮಾಡಬೇಕು ಎಂದು ಚಿಕ್ಕಪ್ಪ ಹೇಳಿದ್ದರು. ಮೊದಲಿಗೆ ಈ ಪಾತ್ರ ಮಾಡುವುದರಿಂದ ತಪ್ಪಿಸಿಕೊಳ್ಳಲು, ಹೊಟ್ಟೆನೋವು ತಲೆ ನೋವು ಎಂಬ ಕಾರಣ ನೀಡುತ್ತಿದ್ದೆ. ಆದ್ರೆ ಯಾವಾಗಲೂ ಹಾಗೆ ತಪ್ಪಿಸಿಕೊಳ್ಳಲು ಸಾಧ್ಯವಿರಲಿಲ್ಲ. ಅನಿವಾರ್ಯವಾಗಿ ಪಾತ್ರಕ್ಕೆ ಒಪ್ಪಿಕೊಳ್ಳಬೇಕಾಯಿತು

***ಪ್ರ: ಸ್ತ್ರೀ ವೇಷ ಮಾಡಿದವರಿಗೆ ಪುರುಷ ವೇಷ ನಿಭಾಯಿಸುವುದು ಒಬ್ಬ ಕಲಾವಿದನಿಗೆ ಸವಾಲಿನ ಕೆಲಸ ಎಂದು ಕೆಲವರು ಹೇಳ್ತಾರೆ ಇದನ್ನು ನೀವು ಹೇಗೆ ನಿಭಾಯಿಸುತ್ತಿದ್ದಿರಿ?***

**ಸಂ.ಗೋ:** ನಾನು ಪುಂಡುವೇಷ ಮಾಡ್ತಾ ಇದ್ದುದರಿಂದ ಅಲ್ಲಿ ಧ್ವನಿಯ ವೇರಿಯೇಷನ್ ಹೆಚ್ಚಾಗಿ ಕಾಣಿಸಿಕೊಳ್ಳುವುದಿಲ್ಲ. ಇನ್ನು ಸ್ತ್ರೀ ಪಾತ್ರಗಳಿಗೆ ನಾವು ಧ್ವನಿಯನ್ನು ಅಳವಡಿಸಿಕೊಳ್ಳುವುದಲ್ಲ ಆ ವೇಷ ಮಾಡಿದಾಗ ಅದು ತನ್ನಿಂತಾನೆ ಆ ಪಾತ್ರಕ್ಕೆ ಒಗ್ಗಿಕೊಳ್ಳಬೇಕು. ಆ ಸ್ತ್ರೀಯ ಗುಣ ವೇಷ ಮಾಡಿಕೊಂಡಾಗ ತನ್ನಿಂದ ತಾನೇ ಬರುತ್ತಿತ್ತು. ಸೀರೆಯ ಗುಣವು ಏನೋ ಗೊತ್ತಿಲ್ಲ ಕಲಾವಿದನಾದವನು ಪೂರ್ಣ ಪ್ರಮಾಣದಲ್ಲಿ ತನ್ನನ್ನು ತಾನು ತೊಡಗಿಸಿ ಕೊಂಡಾಗ ತನಗರಿವಿಲ್ಲದಂತೆ ಸ್ವರಗಳು ಮತ್ತು ನಡೆ–ನುಡಿ ಲಾಲಿತ್ಯಗಳೆಲ್ಲ ಪಾತ್ರಕ್ಕೆ ಅನುಗುಣವಾಗಿ ಹೊಂದಿಕೊಂಡು ಬರುತ್ತದೆ.

***ಪ್ರ: ಪೌರಾಣಿಕ ಪಾತ್ರಗಳಷ್ಟೇ ಅಲ್ಲದೆ ಕಾಲ್ಪನಿಕ ಪ್ರಸಂಗಗಳಲ್ಲೂ ನೀವು ಸಾಕಷ್ಟು ಹೆಸರು ಮಾಡಿದ್ದೀರಿ ಪೌರಾಣಿಕ ಹಾಗೂ ಕಾಲ್ಪನಿಕ ಪಾತ್ರಗಳ ಸಿದ್ಧತೆಗೆ ನಿಮ್ಮ ತಯಾರಿಗಳು ಹೇಗಿತ್ತು?***

**ಸಂ.ಗೋ:** ಕಾಲ್ಪನಿಕ ಪಾತ್ರಗಳಿಗೆ ನಾಟಕವಾದಂತಹ ಅಭ್ಯಾಸಗಳು ಬೇಕಾಗುತ್ತೆ. ನಾಟಕೀಯತೆ ಅನ್ನೋದು ತನ್ನಿಂದ ತಾನಾಗಿ ಬರುವಂತದ್ದು. ಪೌರಾಣಿಕ ಪಾತ್ರಗಳಿಗೆ ಇತಿಮಿತಿ, ಹಿರಿಯರು ಹಾಕಿದಂತಹ ದಾರಿ ಇದೆ. ಮಾತನಾಡುವುದಕ್ಕೂ, ಅಭಿನಯಕ್ಕೂ, ರಸಭಾವ ವ್ಯತ್ಯಾಸಕ್ಕೂ ಒಂದು ದಾರಿ ಇದೆ. ಕಾಲ್ಪನಿಕ ಪಾತ್ರಗಳನ್ನು ಹೇಗೆ ಅಭಿವ್ಯಕ್ತಿಗೊಳಿಸಬಹುದು ಎಂಬ ಚಿಂತನೆ ಪಾತ್ರಧಾರಿ ನಡೆಸಬೇಕಾಗುತ್ತದೆ. ನಾನು ಕರ್ನಾಟಕ ಮೇಳದಲ್ಲಿದ್ದಾಗ ಕಚ್ಚೂರ ಮಾಲ್ದಿ ಪ್ರಸಂಗದ

ಮಾಲ್ದಿಯ ಪಾತ್ರ, ಕಾಡಮಲ್ಲಿಗೆಯ ಪಾತ್ರ, ಡಾಕ್ಟರ್ ಚಂದ್ರ ಶೇಖರ್ ಶೆಟ್ಟಿಯವರ ಸ್ತ್ರೀ ಪಾತ್ರವೇ ಪ್ರಧಾನವಾಗಿರುವಂತಹ ಹಲವು ಪ್ರಸಂಗಗಳಲ್ಲಿ ಪ್ರಸಂಗಗಳಲ್ಲಿ ಅಭಿನಯಿಸಿದ್ದೇನೆ. ಗರತಿ ಗಂಗಾ, ನೀಲಾಂಬರಿ, ದುರ್ಗದ ಸಿರಿ ಬಾಲೆ ಇಂತಹಾ ಆಧುನಿಕ ಪಾತ್ರಗಳನ್ನು ಕವಿ ಬರೆದಂತಹ ಆಶಯಕ್ಕೆ ಸರಿಯಾಗಿ ಪ್ರಸ್ತುತ ಪಡಿಸಬೇಕಾಗುತ್ತದೆ. ದಿನದಿಂದ ದಿನಕ್ಕೆ ಯಾವ ರೀತಿ ಚೆನ್ನಾಗಿ ಅಭಿನಯಿಸಬೇಕು ಎಂಬುದನ್ನು ಚಿಂತನೆ ಮಾಡಬೇಕಾಗುತ್ತದೆ ಕಾಲ್ಪನಿಕ ಪ್ರಸಂಗಗಳಲ್ಲಿ ಸೃಜನಶೀಲತೆಯನ್ನು ತೋರಿಸಲು ಸಾಧ್ಯವಾಗುತ್ತದೆ.

***ಪ್ರ: ಕಲಾವಿದನಿಗೆ ಹೆಚ್ಚು ಸ್ವಾತಂತ್ರ್ಯ ಅನ್ನುವಂಥದ್ದು ಕಾಲ್ಪನಿಕ ಪ್ರಸಂಗಗಳಲ್ಲಿಯೇ? ಪೌರಾಣಿಕ ಪ್ರಸಂಗಗಳಲ್ಲಿಯೇ?***

**ಸಂ.ಗೋ:** ಕಲಾವಿದ ಹೆಚ್ಚು ಇಷ್ಟಪಡುವಂತದ್ದು ಪೌರಾಣಿಕ ಪಾತ್ರಗಳೇ. ಆಧುನಿಕ ಪಾತ್ರಗಳಲ್ಲಿ ಎಷ್ಟೇ ವಿಜೃಂಭಿಸಿದರೂ ಜನ ಮಾನಸದಲ್ಲಿ ಅದುಳಿಯುವುದು ಒಂದು ವರ್ಷ ಮಾತ್ರ. ಮುಂದಿನ ವರ್ಷಕ್ಕೆ ಅದು ಮರೆತು ಹೋಗುತ್ತದೆ. ಆದರೆ ಪೌರಾಣಿಕ ಪ್ರಸಂಗದ ಪಾತ್ರಗಳು ಎಷ್ಟೇ ಸಮಯವಾದರೂ ಹಚ್ಚಹಸುರಾಗಿ ಉಳಿಯುವಂತದ್ದು. ಅದಕ್ಕೆ ಕಾರಣ ಪೌರಾಣಿಕ ಪಾತ್ರಗಳನ್ನು ಪ್ರತಿಪಾದಿಸಿದ ಹಿರಿಯ ಕಲಾವಿದರು. ಪ್ರತಿ ಪಾತ್ರಕ್ಕೆ ದೇಣಿಗೆಯನ್ನು ಕೊಟ್ಟು ರಂಗದಲ್ಲಿ ಚಿರಸ್ಥಾಯಿಯಾಗಿ ಉಳಿಸಿ ಹೋಗಿದ್ದಾರೆ. ಪೌರಾಣಿಕ ಪಾತ್ರಗಳನ್ನು ಹಿರಿಯ ಕಲಾವಿದರು ಮಾಡುತ್ತಿದ್ದ ರೀತಿಯೊಂದಿಗೆ ಹೋಲಿಕೆ ಮಾಡುತ್ತಾರೆ. ಕೋಳ್ಯೂರು ರವರ ಪಾತ್ರ ಈ ರೀತಿಯಾಗಿರುತ್ತಿತ್ತು. ಅದು ಹೀಗಾಗಬೇಕಿತ್ತು, ಎಂಕೆ ರಮೇಶ್ ಆಚಾರ್ ಹೀಗೆ ಮಾಡುತ್ತಿದ್ದರು ಎಂಬುದಾಗಿ ತುಲನೆ ಮಾಡುತ್ತಾರೆ. ಚೆನ್ನಾಗಿ ಆಗಿದೆ ಹೋದಾಗ ಅದನ್ನು ಜನ ಹೇಳುತ್ತಾರೆ.



ಒಂದೊಮ್ಮೆ ಕಲಾ ರಂಗದ ವತಿಯಿಂದ ದ್ರೌಪದಿ ವಸ್ತ್ರಾಪಹರಣ ಪ್ರಸಂಗ ನಡೆಯಿತು. ಆವತ್ತು ದ್ರೌಪದಿ ಪಾತ್ರ ನನ್ನದೇ. ಈ ಪಾತ್ರದಲ್ಲಿ ಸಿದ್ಧಿ ಪ್ರಸಿದ್ಧಿಯನ್ನು ಪಡೆದಂತಹ ಕಲಾವಿದರು ನನ್ನ ಗುರುಗಳು ರಾಮಚಂದ್ರರಾಯರು. ಮುಂಭಾಗದಲ್ಲೇ ಕುಳಿತು ನನ್ನ ಪಾತ್ರ ನಿರ್ವಹಣೆಯನ್ನು ವೀಕ್ಷಿಸುತ್ತಿದ್ದರು. ಆ ಪಾತ್ರ ಮುಗಿದ ಮೇಲೆ ಚೌಕಿಗೆ ಬಂದು ಬೆನ್ನು ತಟ್ಟಿ ನನ್ನನು ಪ್ರೋತ್ಸಾಹಿಸಿದರು. ನಾನು ಕೇಳಿದೆ ಗುರುಗಳೇ ನನ್ನಿಂದ ಏನಾದರೂ ತಪ್ಪಾಗಿದೆಯಾ ಇಂದು ಇಲ್ಲ ಮಗ ಒಳ್ಳೇದಾಗಿದೆ ಎಂದು ಹೇಳಿದರು. ಅವರ ಜೊತೆಯೇ ಕುಳಿತು ಈ ಪ್ರಸಂಗ ವೀಕ್ಷಿಸಿದ್ದ ಹಿರಿಯ ಸಾಹಿತಿಗಳಾದ ಅಂಬಾತನಯ ಮುದ್ರಾಡಿಯವರು ಕೋಳ್ಯೂರ್ ರವರಲ್ಲಿ ಹೇಳಿದ್ದರಂತೆ "ಕೋಳ್ಯೂರರೇ ಇನ್ನು ನೀವು ದ್ರೌಪದಿ ಮಾಡುವುದು ಸಾಕು ನಿಲ್ಲಿಸಿ. ನಿಮ್ಮ ಪರ್ಯಾಯವಾಗಿ ಒಂದು ಜನ ತಯಾರಾಗಿದೆ" ಎಂದು. ಅದು ನನಗೆ ಒಂದು ಹೆಮ್ಮೆಯ ವಿಚಾರ. ಇನ್ನು ನಾನು ಅಭಿಮಾನದಿಂದ ಹೇಳುವ ನನ್ನ ಸ್ತ್ರೀ ಪಾತ್ರದ ಗುರುಗಳು ಎಂಕೆ ರಮೇಶ್ ಆಚಾರ್. ಅವರಿಗೆ ಹೆಚ್ಚಾಗಿ ಕರೆ ಮಾಡಿ ನಾನು ವಿಷಯಗಳನ್ನು ಕೇಳಿ ತಿಳಿದುಕೊಳ್ಳುತ್ತಾ ಇರುತ್ತೇನೆ ಅವರ ತಾಳ್ಮೆ ಮೆಚ್ಚುವಂಥದ್ದು. ಎಂತಹ ಸಂದರ್ಭದಲ್ಲೂ ಅವರು ಪಾತ್ರದ ಬಗ್ಗೆ ಮಾಹಿತಿ ನೀಡುತ್ತಾರೆ ಪದ್ಯ ಮತ್ತು ಅರ್ಥವನ್ನು ಪೂರ್ಣವಾಗಿ ತಿಳಿಸುತ್ತಾರೆ. ಸಹ ಕಲಾವಿದರಿಗೆ ಕಿರಿಯರಿಗೆ ಜ್ಞಾನವನ್ನು ತಿಳಿಸಕೊಡುವ ವಿಶೇಷ ಕೌಶಲ್ಯ ಅವರಿಸಿ ಸಿದ್ಧಿಸಿದೆ. ಎಂಕೆ ರಮೇಶರು ಪಾತ್ರವನ್ನು ಜನರಿಗೆ ಮುಟ್ಟುವ ರೀತಿಯಲ್ಲಿ ಅಭಿನಯಿಸ್ತಾ ಇದ್ರು ಅಲ್ಲದೆ ಹೇಳಿಕೊಡುವುದರಲ್ಲೂ ಸಿದ್ಧ ಹಸ್ತರು ಕಲಾವಿದ ಚೆನ್ನಾಗಿ ಅಭಿನಯಿಸಿದ್ರೆ ಅದನ್ನು ಒಳ್ಳೆಯದಾಗಿದೆ ಎಂದು ಹೇಳುವ ಮನಸ್ಥಿತಿ ಅವರದ್ದು. 'ಅವ ಒಳ್ಳೆಯದಾದರೆ ನನಗೆಲ್ಲಿ ನಷ್ಟ, ಎಂದು ಭಾವಿಸುವ ವರ್ಗ ಅವರಲ್ಲ'.

***ಪ್ರ: ಹಿಂದಿನ ಹಾಗೂ ಇಂದಿನ ಕಾಲ್ಪನಿಕ ಪ್ರಸಂಗಗಳಲ್ಲಿ ಯಾವ ರೀತಿಯ ಬದಲಾವಣೆಗಳಾಗಿವೆ? ಕಥೆಗಳ ಮೌಲ್ಯ ಕಡಿಮೆ ಆಗಿದೆಯಾ ಅಥವ ಜನರ ಅಭಿರುಚಿ ಬದಲಾಗಿದೆಯಾ?***

**ಸಂ.ಗೋ:** ಕಾಲ್ಪನಿಕ ಪ್ರಸಂಗಗಳಲ್ಲಿ ಈಗ ಸಾಕಷ್ಟು ಬದಲಾವಣೆಗಳಾಗಿವೆ. ಹಿಂದಿನ ಕಾಲ್ಪನಿಕ ಪ್ರಸಂಗಗಳಲ್ಲಿ ಒಂದು ಮೋರಲ್ ಇರುತ್ತಿತ್ತು. ಪ್ರಸಂಗಕರ್ತರು ಕೇವಲ ರಂಜನೆಗಾಗಿಯೇ ಪ್ರಸಂಗಗಳನ್ನು ಬರೆಯುತ್ತಿದ್ದಲ್ಲ ಕೊನೆಗೆ ಸಂದೇಶ ನೀಡುತ್ತಿದ್ದರು. ಅದಲ್ಲದೆ ಐತಿಹಾಸಿಕ ಪ್ರಸಂಗಗಳನ್ನು ಆಡುತ್ತಿದ್ದೆವು ಕೋಟಿ ಚೆನ್ನಯ್ಯ, ಕಾಂತಬಾರೆ–ಬೂದಬಾರೆ, ದೇವಪುಂಜ ಪ್ರತಾಪ, ತುಳುನಾಡ ಸಿರಿ, ಇವೆಲ್ಲ ಐತಿಹಾಸಿಕ ಪ್ರಸಂಗಗಳು. ಅದಕ್ಕೆ ಅದರದೇ ಆದ ಚೌಕಟ್ಟಿತ್ತು ಕಾಲ್ಪನಿಕ ಪ್ರಸಂಗಗಳಲ್ಲೂ ಒಂದು ಸಂದೇಶದ ಎಳೆಯನ್ನು ಹಿಡಿದು ಅದನ್ನು ಬೆಳೆಸಿ ಜನ ಮಾನಸದಲ್ಲಿ ಉಳಿಯುವಂತೆ ಮಾಡುತ್ತಿದ್ದರು. ಈಗ ಜನಗಳ ಅಭಿರುಚಿ ಬದಲಾಗಲು ಸಿನಿಮಾದ ಪ್ರಭಾವವು ಇದೆ. ಸಿನಿಮಾದ ಕಥೆಗಳು ಪ್ರಸಂಗಗಳಾಗಿ ಬಂದವು. ಪ್ರಸಂಗಕರ್ತರು ಜನರ ಅಭಿರುಚಿಗೆ ಸರಿಯಾಗಿ ಪ್ರಸಂಗ ಬರೆಯುತ್ತಾರೆ. ಪ್ರಸಂಗಕರ್ತರು ಬರೆದ ಕಥೆಗೆ ಸರಿಯಾಗಿ ಕಲಾವಿದ ತೊಡಗಿಸಿಕೊಳ್ಳಬೇಕಾಗುತ್ತದೆ. ಕಲಾವಿದನಿಗೆ ಬೇರೆ ದಾರಿ ಇಲ್ಲ. ಆಗಿನ ಹಾಗೂ ಈಗಿನ ವ್ಯತ್ಯಾಸಕ್ಕೆ ಪ್ರೇಕ್ಷಕನೇ ಕಾರಣ

***ಪ್ರ: ಪ್ರಸಂಗದಲ್ಲಿ ಹಿಡಿತ ಅನುಭವ ಪಾಂಡಿತ್ಯ ಇರುವವರು ಇದ್ದಾರೆ, ಯಕ್ಷಗಾನದ ಒಳ ಹೊರಗೆ ಬಲ್ಲವರಿದ್ದಾರೆ, ಎಲ್ಲ ವಿಭಾಗಗಳಲ್ಲಿ ನುರಿತವರಿದ್ದಾರೆ. ಇಂತಹವರು ಪ್ರಸಂಗ ಬರೆಯಲು ಮನಸು ಮಾಡುವುದಿಲ್ಲ ಯಾಕೆ?***

**ಸಂ.ಗೋ:** ಸಣ್ಣ ಸಣ್ಣ ಕ್ಷುಲ್ಲಕ ಕಥೆಗಳನ್ನು ಹಿಡಿದು ಪ್ರಸಂಗ ಬರೆಯಲು ಅನುಭವಿ ಪ್ರಸಂಗಕರ್ತರಿಗೆ ಮನಸಾಗುವುದಿಲ್ಲ ಸ್ಟ್ಯಾಂಡರ್ಡ್ ಪ್ರಸಂಗ ಬರೆಯುವ ಪ್ರಸಂಗಕರ್ತನಿಗೆ ಜನಮನ್ನಣೆ ಗಳಿಸಬೇಕು ಅಥವಾ ಆರ್ಥಿಕ ಕಾರಣಕ್ಕೋಸ್ಕರ ಚಿಕ್ಕ ಕಥೆಯನ್ನು ಬರೆಯುವ ಆಸಕ್ತಿ ಇರುವುದಿಲ್ಲ ಅವರು ಒಳ್ಳೆ ರೀತಿಯ ಪ್ರಸಂಗಗಳನ್ನು ಕೊಡುವ ಆಲೋಚನೆ ಇರುವವರು ಈ ರೀತಿಯ ತೊಡಕು ಬಂದಾಗ ಅವರಿಗೆ ಇಂತಹ ಪ್ರಸಂಗಗಳನ್ನು ಬರೆಯುವುದು ಬೇಡ ಎಂದೆನಿಸುತ್ತದೆ '

***ಪ್ರ: ಯಕ್ಷಗಾನದಲ್ಲಿ ಸಾಕಷ್ಟು ಪಲ್ಲಟಗಳಾಗಿದೆ. ಈ ಹಿನ್ನೆಲೆಯಲ್ಲಿ ಯಕ್ಷಗಾನ ಸಾಹಿತ್ಯ ಸಮ್ಮೇಳನ ಯಾವ ರೀತಿಯ ಬೆಳವಣಿಗೆಗೆ ಕಾರಣವಾಗಬಹುದು ಒಬ್ಬ ಪ್ರೇಕ್ಷಕರಾಗಿ ನೀವು ಅದನ್ನ ಯಾವ ರೀತಿ ಅವಲೋಕನ ಮಾಡುತ್ತೀರಿ?***


**ಸಂ.ಗೋ:** ಸಮ್ಮೇಳನ ನಡೆದಿರುವುದು ಬಹಳ ಸಂತೋಷದ ವಿಷಯ. ಇದಕ್ಕಿಂತ ಮೊದಲೇ ಈ ಕಾರ್ಯಕ್ರಮ ನಡೆಯಬೇಕಿತ್ತು. ನಮ್ಮ ನಾಡಿನ ಹೆಮ್ಮೆಯ ಕಲೆ ಇದು. ಇದನ್ನು ರಾಜ್ಯದ ಕಲೆಯಾಗಿ ಗುರುತಿಸಬೇಕೆನ್ನುವುದೇ ಹಲವರ ಒಕ್ಕೊರಲ ಅಭಿಪ್ರಾಯ. ಕಲಾವಿದನಾದವನಿಗೆ ಇದು ಒಂದು ಅಭಿಮಾನ ಅಥವಾ ಸಂತೋಷಪಡುವ ವಿಚಾರ. ಸಂಸ್ಕೃತಿ ಇಲಾಖೆಯ ಸಚಿವರು ನಮ್ಮವರೇ ಆದಂತಹ ಸುನಿಲ್ ಕುಮಾರ್ ರವರು ಮುಂದಾಳತ್ವ ವಹಿಸಿದ್ದು ಸಂತೋಷದ ವಿಚಾರ.



ಬಹಳ ಪ್ರೀತಿಯಿಂದ ಇದು ಆಗಲೇಬೇಕು ಎನ್ನುವ ಹಠ ತೊಟ್ಟು ಅವರು ಇದನ್ನು ನಡೆಸಿದ್ದಾರೆ. ಈ ಸಮ್ಮೇಳನದಲ್ಲಿ ಎಳೆಯರು ಮುದುಕರು ಎಲ್ಲ ಕಲಾವಿದರು ಭಾಗವಹಿಸಲು ಸಾಧ್ಯವಾಯಿತು.

***ಪ್ರ: ಯಕ್ಷಗಾನ ರಂಗಸ್ಥಳದಲ್ಲಿ ಪ್ರಸ್ತುತ ಪಡಿಸಲು ಹಿತಮಿತವಾದ ಜ್ಞಾನ ಸಾಕಾಗುತ್ತದೆ. ಪದ್ಯಕ್ಕೆ ತಕ್ಕಷ್ಟು ಅರ್ಥ ಹೇಳಿದರೆ ಸಾಕು. ತಾಳಮದ್ದಳೆ ಪ್ರೊಲಾಂಗ್ ಆಗಿ ನಡೆಯುವ ಪ್ರೊಸೆಸ್. ಈ ವಿಭಾಗದಲ್ಲಿ ನಿಮ್ಮ ಸಿದ್ಧತೆಗಳು ಮತ್ತು ಅನುಭವಗಳ ಬಗ್ಗೆ ಹೇಳಿ***

**ಸಂ.ಗೋ:** ಯಕ್ಷಗಾನದಲ್ಲಾದರೆ ಎಲ್ಲಾ ವಿಭಾಗಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ. ರೂಪದಲ್ಲಿ, ನಾಟ್ಯದಲ್ಲಿ, ಅಭಿನಯದಲ್ಲಿ, ಮಾತಿನಲ್ಲಿ, ಯಕ್ಷಗಾನ ವೇಷಧಾರಿಯಾಗಿ ಕಾಣಿಸಿಕೊಳ್ಳಬಹುದು. ತಾಳಮದ್ದಳೆಯಲ್ಲಿ ತನ್ನ ಜ್ಞಾನಶಕ್ತಿಯಿಂದಲೇ ಅವನು ವಿಜೃಂಭಿಸಬೇಕು. ಅಲ್ಲಿ ಮಾತುಗಾರಿಕೆ ಪ್ರಧಾನವಾಗಿರುವಂಥದ್ದು. ನಿರಂತರ ಅಧ್ಯಯನ ತಾಳಮದ್ದಳೆ ಕ್ಷೇತ್ರಕ್ಕೆ ಬೇಕಾಗುತ್ತದೆ ತಾಳಮದ್ದಳೆ ಕ್ಷೇತ್ರದಲ್ಲಿ ಸಿದ್ಧಿ ಪ್ರಸಿದ್ಧಿಯನ್ನು ಪಡೆಯಬೇಕಾದರೆ ಸಾಧಾರಣವಾದಂತಹ ಜ್ಞಾನ ಭಂಡಾರ ಸಾಕಾಗುವುದಿಲ್ಲ. ವಿಶೇಷವಾದಂತಹ ಅನುಭವ ಬೇಕು. ವಿದ್ವಾಂಸರು, ಒಳ್ಳೆ ಮಾತುಗಾರರ ಮಾತುಗಳನ್ನು ಕೇಳಿಯೂ ಅನುಭವ ಪಡೆದುಕೊಳ್ಳಲು ಸಾಧ್ಯ. ಪರಿಶ್ರಮವು ಬೇಕು.



***ಪ್ರ: ಒಬ್ಬ ಕಲಾವಿದರಾಗಿ ನೀವು ಜನಮಾನಸದಲ್ಲಿ ಉಳಿದಿದ್ದೀರಿ ಯಕ್ಷಗಾನದಲ್ಲಿ ವಿಶೇಷವಾಗಿ ಏನಾದರೂ ಕೆಲಸಗಳನ್ನು ಮಾಡಬೇಕು ಎನ್ನುವಂತಹ ಯೋಚನೆಗಳು ಇದೆಯಾ?***

**ಸಂ.ಗೋ:** ಯಕ್ಷಗಾನದಲ್ಲಿ 48 ವರ್ಷದ ತಿರುಗಾಟ ನಡೆಸಿದ್ದೇನೆ. ವಿಶೇಷವಾದದ್ದು ಏನು ಮಾಡುವುದೆಂದು ಗೊತ್ತಿಲ್ಲ. ಆದರೆ ಯಾರಾದರೂ ಕಲಾವಿದರು ಮಾತುಗಾರಿಕೆ, ಅಭಿನಯ, ಒಂದು ಪಾತ್ರವನ್ನು ಯಾವ ರೀತಿ ಪ್ರಸ್ತುತಪಡಿಸುವುದು ಇವುಗಳ ಬಗ್ಗೆ ಬಂದು ಕೇಳಿದರೆ ಅವರಿಗೆ ಮಾರ್ಗದರ್ಶನ ಮಾಡಬಲ್ಲೆ. ಈಗಿನ ಕೆಲ ಕಲಾವಿದರಲ್ಲಿ ಆಭರಣ ಹಾಗೂ ವೇಷಭೂಷಣ ಧರಿಸುವ ಔಚಿತ್ಯದ ಕೊರತೆ ಇದೆ. ನನಗೆ ಇದರ ಅನುಭವ ಆಗಿದೆ. ಒಂದು ಸಲ ನನ್ನ ಜೊತೆ ವೇಷ ಮಾಡುವ ಕಲಾವಿದ ಪಾತ್ರಕ್ಕೆ ಮೀರಿದ ಒಳ್ಳೆ ಸೀರೆ ಉಡುತ್ತೇನೆ ಎಂದು ಹೇಳಿದಾಗ ಅದು ಬೇಡ ಆ ಪಾತ್ರಕ್ಕೆ ಆ ರೀತಿಯ ಸೀರೆ ಸರಿಯಾಗುವುದಿಲ್ಲ ಎಂದು ಹೇಳಲು ದಾಕ್ಷಿಣ್ಯಕ್ಕೆ ಒಳಗಾಗಿದ್ದೆ. ಬೇಡ ಎಂದು ಹೇಳಿದರೆ ಅವನ ಮನಸ್ಸಿಗೆ ಬೇಸರವಾಗುತ್ತದೆ. ಸಖಿ ಪಾತ್ರಕ್ಕೆ ವಿಶೇಷವಾದ ಅಲಂಕಾರ ಉಡುಗೆಗಳು ಸರಿಯಾಗದು. ಶ್ರೀನಿವಾಸ ಕಲ್ಯಾಣದಲ್ಲಿ ಪದ್ಮಾವತಿಯ ಸಖಿ ವಿಶೇಷವಾಗಿ ವೇಷ ಮಾಡಿಕೊಂಡು ಬಂದರೆ ಅಲ್ಲಿ ಪದ್ಮಾವತಿ ಯಾರು ಎಂಬುದನ್ನು ಗುರುತಿಸಲು ಕಷ್ಟವಾಗುತ್ತದೆ. ಇನ್ನು ಚೂಡಾಮಣಿ ಪ್ರಸಂಗದ ಸೀತೆಯ ಪಾತ್ರ, ತಿಳಿದವರೂ ಈ ತಪ್ಪು ಮಾಡುತ್ತಾರೆ. ಅಶೋಕ ವನದಲ್ಲಿರುವ ಸೀತೆ ತಲೆ ಕೆದರಿ ಕುಳಿತುಕೊಳ್ಳಬೇಕು ಸಾಮಾನ್ಯ ಸ್ತ್ರೀಯಾಗಿ ಮಾಂಗಲ್ಯ ಮತ್ತೆ ಬೆಂಡೋಲೆ ಮಾತ್ರ ಧರಿಸಿರಬೇಕು. ಕೆಲವರು ಮುಂದಲೆಯನ್ನು ಧರಿಸಿಕೊಂಡು ಬಂಗಾರದ ಬಳೆಗಳನ್ನು ಹಾಕಿಕೊಂಡು ಕುಳಿತುಕೊಳ್ಳುತ್ತಾರೆ. ಇದು ಪಾತ್ರ ಪೋಷಣೆಗೆ ಅಷ್ಟು ಸೂಕ್ತ ಎಂದೆನಿಸುವುದಿಲ್ಲ. ರಾವಣ ಸೀರೆಯನ್ನು ಕದ್ದುಕೊಂಡು ಹೋಗುವಾಗ ಅನಸೂಯಾ ದೇವಿ ಕೊಟ್ಟಿರುವಂತಹ ಒಡವೆಗಳನ್ನು ಅವಳು ಬೇಡ ಎಂದವ:ಳು ಅಲ್ಲೇ ಬಿಸಾಡಿ ಹೋಗುತ್ತಾಳೆ. ಅವಳು ಉಳಿಸಿಕೊಂಡಿದ್ದು ಚೂಡಾಮಣಿಯನ್ನು ಮಾತ್ರ. ಅದು ಕಣ್ಣಿಗೆ ಕಾಣುವಂತೆ ಇರುವುದಿಲ್ಲ. ಅದನ್ನು ಸೀತೆ ಶಿರದಲ್ಲಿ ಇರಿಸಿಕೊಂಡಿರುತ್ತಾಳೆ. ಪಾತ್ರದ ಲೆಕ್ಕದಲ್ಲಿ ಇದನ್ನು ಕಲಾವಿದರು ಗಮನಿಸಬೇಕು.

---



**ಮಾರಣಕಟ್ಟೆ** ಮೇಳದಲ್ಲಿ ಪ್ರಧಾನ ಹಾಸ್ಯಗಾರರಾಗಿ ಸೇವೆ ಸಲ್ಲಿಸುತ್ತಿರುವ **ಎಳಬೇರು ಶೇಖರ ಶೆಟ್ಟಿ**ಯವರು 36 ವರ್ಷಗಳ ತಿರುಗಾಟದ ಅನುಭವವನ್ನು ಹೊಂದಿದ್ದಾರೆ. ಇವರು ಬಾಲ್ಯದಲ್ಲಿ ಶಾಲೆ ಕಲಿಯಲು ತಮ್ಮೂರಾದ ಎಳಬೇರಿನಿಂದ ಕಮಲಶಿಲೆಗೆ ಬರಬೇಕಿತ್ತು. ಆ ಸಂದರ್ಭದಲ್ಲಿ ಯಕ್ಷಗಾನ ಗುರುಗಳಾದ ಮಹಾಬಲ ದೇವಾಡಿಗರ ಮನೆಯಲ್ಲಿ ಯಕ್ಷಗಾನವನ್ನು ಮಕ್ಕಳಿಗೆ ಹೇಳಿಕೊಡುವ ಚಟುವಟಿಕೆ ನಡೆಯುತ್ತಿತ್ತು. ದಿನವೂ ಅದೇ ದಾರಿಯಲ್ಲಿ ಶಾಲೆಗೆ ಹೋಗುವಾಗ ಅದನ್ನು ನೋಡುತ್ತಿದ್ದ ಶೇಖರ ಶೆಟ್ಟಿಯವರಿಗೆ ಯಕ್ಷಗಾನದ ಬಗ್ಗೆ ಒಲವು ಮೂಡಿತು. ಅಲ್ಲದೆ ದೇವಾಡಿಗರ ತಮ್ಮ ಆನಂದ ದೇವಾಡಿಗ ಹಾಗೂ ಗೋಳಿಕೆರೆ ಚಂದ್ರಗೌಡರೂ ಇವರು ಯಕ್ಷಗಾನಕ್ಕೆ ಸೇರಲು ಪ್ರೇರಣೆಯಾದರು. ಕೆಲಕಾಲ ಅವರೊಂದಿಗೆ ನವರಾತ್ರಿ ಸಮಯದಲ್ಲಿ ಹೂವಿನ ಕೋಲು ತಿರುಗಾಟಕ್ಕೆ ಹೋಗುತ್ತಿದ್ದರು, ನಂತರ ಯಕ್ಷಗಾನ ಕಲಿಯುವುದಕ್ಕೆ ಮುಂದಾಗುತ್ತಾರೆ. ಮೊದಲಿಗೆ ಯಕ್ಷಗಾನ ಭೀಷ್ಮರೆಂದೆನಿಸಿಕೊಂಡಿದ್ದ ಮೂಡಲಕಟ್ಟೆ ಮುತ್ತಯ್ಯ ಹೆಗಡೆಯವರು ನಡೆಸುತ್ತಿದ್ದ ಮಾರಣಕಟ್ಟೆ ಮೇಳಕ್ಕೆ ಇವರ ಸೇರ್ಪಡೆಯಾಗುತ್ತದೆ. ಆರಂಭದಲ್ಲಿ ಕೋಡಂಗಿ ವೇಷ ಮಾಡುತ್ತಾ, ನಂತರ ಬಾಲಗೋಪಾಲ, ಸ್ತ್ರೀವೇಷ ನಂತರ ಮುಂಡಸು ವೇಷಧಾರಿಯಾಗಿ ಭಡ್ತಿ ಪಡೆಯುತ್ತಾರೆ. ನಂತರ ಹಾಸ್ಯ ಕಲಾವಿದರಾಗಿ ಗುರುತಿಸಿಕೊಳ್ಳುತ್ತಾರೆ.

***ಪ್ರ: ಹಾಸ್ಯ ಪಾತ್ರಗಳಲ್ಲಿ ನೀವು ಗುರುತಿಸಿಕೊಳ್ಳುವಂತಾದದ್ದು ಹೇಗೆ?***

**ಶೇ.ಶೆ:** ನಾನು ಹಾಸ್ಯ ಪಾತ್ರಗಳಲ್ಲಿ ಗುರುತಿಸಿಕೊಳ್ಳಲು ಕಾರಣವಾಗಿದ್ದು ಒಂದು ಪ್ರಸಂಗ – ಮಾರಣಕಟ್ಟೆ ಮೇಳದಲ್ಲಿ ಆಗ ಹೊಸ ಪ್ರಸಂಗಗಳನ್ನು ಆಡುತ್ತಿದ್ದರು. ಸೀತಾನದಿ ಗಣಪಯ್ಯ ಶೆಟ್ರು ಬರೆದಂತಹ ಜಲಕನ್ಯೆ ಎಂಬ ಪ್ರಸಂಗದಲ್ಲಿ ಖಳನಾಯಕನ ಜೊತೆ ಜೋಡಿಯಾಗಿ ಹೋಗುವ ಒಂದು ಹಾಸ್ಯ ಪಾತ್ರವಿತ್ತು. ಆ ಪಾತ್ರವನ್ನು ನಮ್ಮ ಗುರುಗಳಾದ ಮಹಾಬಲ ದೇವಾಡಿಗರು ನಿರ್ವಹಿಸುತ್ತಿದ್ದರು. ಅದಕ್ಕೆ ಎದುರಾಳಿಯಾಗಿ ಪ್ರೇಮಿಸುವ ಸ್ತ್ರೀ ಪಾತ್ರವೊಂದಿದೆ.



ಆ ಸ್ತ್ರೀ ವೇಷದ ಜೊತೆಯಲ್ಲಿ ವ್ಯಂಗ್ಯ ಸಖಿಯಾಗಿ ನಾನು ವೇಷ ಮಾಡುತ್ತಿದ್ದೆ ಗುರುಗಳ ಹಾಸ್ಯಕ್ಕೂ ವ್ಯಂಗ್ಯಸಖಿಗೂ ಒಂದು ಸಂಬಂಧವಿತ್ತು. ಈ ಹಾಸ್ಯದ ಸನ್ನಿವೇಶ ಆ ಕಾಲಕ್ಕೆ ಜನರಿಗೆ ಬಹಳ ಇಷ್ಟವಾಯಿತು. 25 ವರ್ಷದ ಹಿಂದಿನ ಕಥೆ ಇದು. ಜನ ಅದಕ್ಕೆ ತುಂಬಾ ಪ್ರೋತ್ಸಾಹ ನೀಡಿದರು. ಅಲ್ಲಿಂದ ಹಾಸ್ಯಗಾರನಾಗಿ ನನ್ನ ಪ್ರಯಾಣ ಶುರುವಾಯಿತು. ಅದಾದ ಮೇಲೆ ಸಣ್ಣಪುಟ್ಟ ಹಾಸ್ಯ ಪಾತ್ರಗಳನ್ನು ನೀಡುವುದಕ್ಕೆ ಶುರುಮಾಡಿದರು. ರತಿ ಕಲ್ಯಾಣದ ದೂತ, ಕೌಂಡ್ಲಿಕನ ದೂತ, ಹೀಗೆ ನಾನು ಮಾಡುತ್ತಿದ್ದ ಪಾತ್ರಗಳನ್ನು ಮೇಳದ ಭಾಗವತರಾಗಿದ್ದ ಮರಿಯಪ್ಪಾಚಾರ್ ಒಪ್ಪಿಕೊಳ್ಳುತ್ತಿದ್ದರು. ಆಗ ಭಾಗವತರು ಹೇಳಿದರೆಂದರೆ ಮುಗಿಯಿತು. ಇತರ

ಕಲಾವಿದರೂ ಅದನ್ನು ಒಪ್ಪಿಕೊಳ್ಳುತ್ತಿದ್ದರು. ನಂತರ ಎಲ್ಲರೂ ಪ್ರೋತ್ಸಾಹಿಸಲು ಪ್ರಾರಂಭಿಸಿದರು ನೀಲಾವರ ಮಹಾಬಲ ಶೆಟ್ರು, ಮೊಳವಳ್ಳಿ ಹಿರಿಯ ನಾಯಕರು, ಐರಬೈಲ್ ಆನಂದ ಶೆಟ್ರು, ಅನಂತಕುಲಾಲ್ ರಾವ್, ಆಲೂರು ಸುರೇಂದ್ರ, ಮೊದಲಾದವರು ನನ್ನ ಪಾತ್ರಗಳಿಗೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು.

***ಪ್ರ: ನಿಮ್ಮ ಹಾಸ್ಯದ ಪಾತ್ರಕ್ಕೆ ಪ್ರೇರಣೆ ಯಾರು?***

**ಶೇ.ಶೆ:** ಪ್ರೇರಣೆ ಅನ್ನುವುದಕ್ಕಿಂತ ನನಗೆ ಸರಿ ಅನಿಸಿದ್ದನ್ನು ನಾನು ರಂಗದಲ್ಲಿ ನೀಡುತ್ತಿದ್ದೆ. ನಾನು ತುಂಬಾ ಯಕ್ಷಗಾನಗಳನ್ನು ನೋಡುತ್ತಿದ್ದೆ. ನಾನು ನಿರ್ವಹಿಸುವ ಪಾತ್ರಗಳು ಯಾವುದೇ ಮೇಳದಲ್ಲಿ ಪ್ರದರ್ಶನವಾಗುತ್ತಿದ್ದರೆ ಎಲ್ಲಿ ಪ್ರಸಂಗ ನಡೆಯುತ್ತದೋ ಅಲ್ಲಿಗೆ ಖುದ್ದು ಹೋಗಿ ನೋಡುತ್ತಿದ್ದೆ. ಯಾವ ಕಲಾವಿದರು ಹೇಗೆ ಪಾತ್ರ ನಿಭಾಯಿಸುತ್ತಾರೆ ಎನ್ನುವುದನ್ನು ಗಮನಿಸುತ್ತಿದ್ದೆ. ನನಗೆ ಯಾವ ವೇಷದ ಬಗ್ಗೆ ಮಾಹಿತಿ ಬೇಕೋ ಅದನ್ನು ಅವರ ಮನೆಗೆ ಹೋಗಿ ಕೇಳಿ ತಿಳಿದುಕೊಳ್ಳುತ್ತಿದ್ದೆ. ಟೆಂಟ್ ಮೇಳದ ಎಲ್ಲ ಯಕ್ಷಗಾನಗಳನ್ನು ಬಿಡದೆ ನೋಡುತ್ತಿದ್ದೆ. ಒಂದು ಪ್ರಸಂಗದ ನಡೆ ಹೀಗೆಯೇ ಎಂದಿರುತ್ತದೆ. ಆರಂಭದಲ್ಲಿ ಅದನ್ನು ನಾವು ತಿಳಿದುಕೊಂಡರೆ ಪಾತ್ರಕ್ಕೆ ಒಪ್ಪುವ ಸಾಹಿತ್ಯ ಸಂದರ್ಭೋಚಿತ ಮಾತುಗಳನ್ನು ತುಂಬಬಹುದು. ಹೀಗೆ ನಾನು ಪಾತ್ರ ನಿರ್ವಹಣೆ ಮಾಡುತ್ತೇನೆ.

***ಪ್ರ: ಈಗಿನ ಹಾಸ್ಯಗಾರರು, ಜನರ ಮೆಚ್ಚುಗೆ ಪಡೆಯಲು ಯಾವ ಮಟ್ಟಕ್ಕೂ ಇಳಿಯುವುದನ್ನು ಕಾಣುತ್ತೇವೆ. ಹಿಂದೆ ರಂಗದ ಹಾಸ್ಯಕ್ಕೆ ರಾಜ ಹಾಸ್ಯ ಎಂಬ ಶಿಸ್ತು ಇರುತ್ತಿತ್ತು ಈಗ ಸಾಕಷ್ಟು ಬದಲಾವಣೆಗಳಾಗಿವೆ, ಈ ಬದಲಾವಣೆಗಳ ಬಗ್ಗೆ ನಿಮ್ಮ ಅನಿಸಿಕೆ ಏನು?***

**ಶೇ.ಶೆ:** ಬದಲಾವಣೆಗಳು ಬೇಕು. ಹೊಸ ಪ್ರಸಂಗಗಳು ನಡೆಯುವಾಗ ಕಾಲಘಟ್ಟದ ವಿಷಯಗಳನ್ನು ಬಳಸಿಕೊಂಡರೆ ತಪ್ಪಿಲ್ಲ. ಹಾಗೆಂದು ಅದನ್ನೇ ಓಲೈಸಿಕೊಂಡು ಹೋಗುವುದೂ ಸರಿಯಲ್ಲ. ಹೊಸ ಪ್ರಸಂಗದಲ್ಲಿ ಇಂತಹ ವಿಷಯಗಳನ್ನು ಆಕ್ಷೇಪ ಮಾಡುವಂತಿಲ್ಲ.

***ಪ್ರ: ಹಾಸ್ಯ ಪಾತ್ರಧಾರಿಗಳಿಗೆ ಹೆಜ್ಜೆಗಾರಿಕೆ ಮುಖ್ಯವಲ್ಲ. ಹಾಸ್ಯ ಪಾತ್ರ ಏನೇ ಮಾಡಿದರೂ ಹಾಸ್ಯವಾಗುತ್ತದೆ ಎಂದು ಹೇಳುತ್ತಾರೆ. ಹೆಜ್ಜೆಗಳ ಬಗ್ಗೆ ಕಲಿತಿಲ್ಲದಿದ್ದರೂ ಯಕ್ಷಗಾನದಲ್ಲಿ ವೇಷ ಪಾತ್ರ ಮಾಡಬಹುದಾ? ಉದಾಹರಣೆಗೆ ನಾಟಕ ಕಲಾವಿದರು ಯಕ್ಷಗಾನ ರಂಗದಲ್ಲಿ ಕಾಣಿಸಿಕೊಳ್ಳುವುದು. ಈ ಬಗ್ಗೆ ನಿಮಗೆ ಏನೆನಿಸುತ್ತದೆ.***

**ಶೇ.ಶೆ:** ಅದು ತಪ್ಪು ಕಲ್ಪನೆ. ಹಾಸ್ಯ ವಿಭಾಗದಲ್ಲಿ ಕುಣಿಯುವುದಾದರೆ ತುಂಬ ವೆರೈಟಿ ಉಂಟು. ಅದನ್ನು ತೋರಿಸಿಕೊಟ್ಟ ಕಲಾವಿದರಿದ್ದಾರೆ. ನಮ್ಮ ಸಾಮರ್ಥ್ಯದ ಮೇಲೆ ನಾವು ಕುಣಿಯಬಹುದು. ಯಕ್ಷಗಾನದ ಹಾಸ್ಯದಲ್ಲಿ ಬೇರೆ ಬೇರೆ ರೀತಿಯ ಕುಣಿತಗಳನ್ನು ತೋರಿ ಕೊಟ್ಟವರಿದ್ದಾರೆ. ಟೆಂಟ್ ಮೇಳದಲ್ಲಿ ರಮೇಶ್ ಭಂಡಾರಿ ಅವರು ತುಂಬಾ ವೆರೈಟಿ ಕುಣಿಯುತ್ತಾರೆ. ಹಾಗೆಯೇ ತೆಂಕಿನಲ್ಲಿ ಸೀತಾರಾಮ ಕುಮಾರ್ ಕಟೀಲ್ ಅವರು ಬಡಗಿಗೆ ಬಂದು ತುಂಬಾ ವೆರೈಟಿ ಕುಣಿತ ಮಾಡಿದ್ದಾರೆ ಕುಣಿತವನ್ನೇ ಹಾಸ್ಯ ಮಾಡಿ ತೋರಿಸಿದವರು ಇದ್ದಾರೆ. ಯಕ್ಷಗಾನ ಕಲಾವಿದನಿಗೆ ಹೆಜ್ಜೆಗಾರಿಕೆಯ ಬಗ್ಗೆ ತಿಳಿದಿರಬೇಕು.

**ಕಲಾವಿದರು: ಎಳಬೇರು ಶೇಖರ ಶೆಟ್ಟಿ, ಮಾರಣಕಟ್ಟೆ ಮೇಳದ ಕಲಾವಿದರು**

**ತಂದೆ: ಗಣಪಯ ಶೆಟ್ಟಿ**

**ತಾಯಿ: ಲಕ್ಕಮ್ಮ ಶೆಟ್ಟಿ**

**ಹುಟ್ಟೂರು: ಕಮಲಶಿಲೆ ಗ್ರಾಮದ ಎಳಬೇರು**

**ಯಕ್ಷಗಾನದ ಗುರುಗಳು: ಕಮಲಶಿಲೆ ಮಹಾಬಲ ದೇವಾಡಿಗರು**

**ಧರ್ಮಪತ್ನಿ: ಸರಸ್ವತಿ**

**ಮಕ್ಕಳು: ಪ್ರಸನ್ನ ಕುಮಾರ್, ಪ್ರಗತಿ**

**ಹೆಸರು ತಂದುಕೊಟ್ಟ ಪಾತ್ರಗಳು: ಮಾರಣಕಟ್ಟೆ ಕ್ಷೇತ್ರ ಮಹಾತ್ಮೆಯ ಮಂಜ ಹಾಗೂ ಮಂಜಿಯ ಪಾತ್ರ, ನಳದಮಯಂತಿಯ ಬಾಹುಕ ಕೃಷ್ಣಾರ್ಜುನ ಕಾಳಗದ ದಾರುಕ, ರತಿ ಕಲ್ಯಾಣದ ದೂತ, ಕಮಲ ಭೂಪನ ದೂತ, ಪಾಪಣ್ಣ ವಿಜಯದ ಪಾಪಣ್ಣ, ಕಂಸವಧೆಯ ರಜಕ, ಶಶಿಪ್ರಭಾ ಪರಿಣಯದ ದೂತಿ**



***ಪ್ರ: ನಿಮಗೆ ತುಂಬಾ ತೃಪ್ತಿ ಹಾಗೂ ಹೆಸರು ಕೊಟ್ಟಿರುವಂತಹ ಪಾತ್ರಗಳು ಯಾವುದು?***

**ಶೇ.ಶೆ:** ಮಾರಣಕಟ್ಟೆ ಕ್ಷೇತ್ರ ಮಹಾತ್ಮೆಯಲ್ಲಿ ಮಂಜ ಹಾಗೂ ಮಂಜಿ ಎಂಬ ಗಂಡ ಹೆಂಡತಿಯ ಪಾತ್ರಗಳಿವೆ. ಈ ಎರಡೂ ಪಾತ್ರವನ್ನು ನಾನು ನಿರ್ವಹಿಸಿದ್ದೇನೆ. ಮಂಜನ ಪಾತ್ರ ನನ್ನನ್ನು ಜನರಿಗೆ ತುಂಬಾ ಹತ್ತಿರಕ್ಕೆ ಮುಟ್ಟಿಸಿದೆ. ಮಾರಣಕಟ್ಟೆ ಕ್ಷೇತ್ರ ಮಹಾತ್ಮೆಯ ಆಡಿಯೋ ಮತ್ತು ವಿಡಿಯೋ ರೆಕಾರ್ಡಿಂಗ್ ಗಳಾಗಿವೆ. ಎರಡರಲ್ಲೂ ಮಂಜನ ಪಾತ್ರವನ್ನು ನಾನೇ ನಿರ್ವಹಿಸಿದ್ದೇನೆ. ಮಾರಣಕಟ್ಟೆಯ ಭಕ್ತಾದಿಗಳಿಗೆ ಈ ಪಾತ್ರ ಬಹಳ ಇಷ್ಟವಾಗಿದೆ. ಇದು ಸಾಕಷ್ಟು ಪ್ರಚಾರವೂ ಆಯಿತು.

***ಪ್ರ: ಮಾರಣಕಟ್ಟೆ ಮೇಳ ಬಿಟ್ಟು ಬೇರೆ ಮೇಳಕ್ಕೆ ಯಾಕೆ ಹೋಗಲಿಲ್ಲ?***

**ಶೇ.ಶೆ:** ಬೇರೆ ಮೇಳಕ್ಕೆ ಹೋಗಲಿಕ್ಕೆ ತುಂಬಾ ಕರೆ ಬರುತ್ತದೆ. ಆರಂಭದಲ್ಲಿ ನಾನು ಗೆಜ್ಜೆ ಕಟ್ಟಿದ್ದು ಮಾರಣಕಟ್ಟೆ ಮೇಳದಲ್ಲಿ. ನಂತರ ಎಂ ಎನ್ ಹೆಗಡೆಯವರು ಬಕ್ವಾಡಿ ಮೇಳ ಎಂದು ಮಾಡಿದ್ದರು. ಅದರಲ್ಲಿ ಒಂದೆರಡು ವರ್ಷ ಸೇವೆ ಸಲ್ಲಿಸಿದೆ.

ನಂತರ ಮಾರಣಕಟ್ಟೆ ಮೇಳದಲ್ಲೇ ಉಳಿದುಕೊಂಡಿದ್ದೇನೆ. ಈ ಮೇಳ, ಕ್ಷೇತ್ರದ ದೇವರು, ಯಜಮಾನರು, ಪರಿಸರ ಅಭಿಮಾನಿಗಳಿಂದ ಇಲ್ಲಿಯವರೆಗೆ ಈ ಹೊತ್ತಿನವರಿಗೆ ಏನು ಸಮಸ್ಯೆಗಳು ನ್ಯೂನ್ಯತೆಗಳು ಆಗಿಲ್ಲ. ಈ ಮೇಳದಲ್ಲೇ ನನಗೆ ತೃಪ್ತಿಯಿದೆ. ಒಟ್ಟು 36 ವರ್ಷಗಳು ಸೇವೆ ಸಲ್ಲಿಸಿದ್ದೇನೆ. ಹಾಗಾಗಿ ಈ ಮೇಳವನ್ನು ಬಿಟ್ಟು ಹೋಗಲು ಮನಸ್ಸಿಲ್ಲ



***ಪ್ರ: ಮಾರಣಕಟ್ಟೆ ಮೇಳದ ವ್ಯವಸ್ಥೆಗಳು ಹೇಗಿವೆ? ಕಲಾವಿದರಿಗೆ ಭದ್ರತೆ ಮತ್ತು ಅವಕಾಶಗಳ ಬಗ್ಗೆ ಹೇಳಿ...***

**ಶೇ.ಶೆ:** ಮಾರಣಕಟ್ಟೆ ಮೇಳ ಎನ್ನುವಂತದ್ದು ಸಮುದ್ರಕ್ಕೆ ಸಮಾನವಾದಂತಹದ್ದು. ಅದರ ಆಳ ಅಂತರ ಕಂಡುಕೊಳ್ಳಲು ಯಾರಿಗೂ ಸಾಧ್ಯವಿಲ್ಲ. ಮೇಳದಲ್ಲಿ ನಾವು ಶಿಸ್ತಿನಿಂದ ಇದ್ದದ್ದೇ ಆದರೆ ಯಾವುದೇ ರೀತಿಯ ತೊಂದರೆಗಳು ಉಂಟಾಗುವುದಿಲ್ಲ. ಬಡಗಿನಲ್ಲಿ ಹೆಸರಾಂತ ಮೇಳ ಮಂದಾರ್ತಿ ಮತ್ತು ಮಾರಣಕಟ್ಟೆ ಮೇಳಗಳು. ಮಾರಣಕಟ್ಟೆ ಕ್ಷೇತ್ರದ 3 ಮೇಳಗಳಿವೆ ಇದು ಶ್ರೀಮಂತ ಮೇಳ. ಮೇಳದಲ್ಲಿ ಮೇಳದ ಶಿಸ್ತಿಗೆ, ಕ್ರಮಕ್ಕೆ ಒಳಪಟ್ಟರೆ ಯಾರಿಗೂ ಏನು ತೊಂದರೆ ಇಲ್ಲ. ಕಲಾವಿದರು ಅಶಿಸ್ತಿನಿಂದ ದಾರಿ ತಪ್ಪಿ ನಡೆದರೆ ಸಮಸ್ಯೆಗಳಾಗುವುದು ಸಹಜ.

***ಪ್ರ: ಬಯಲಾಟ ಮೇಳಗಳಲ್ಲಿ ಹೆಚ್ಚಾಗಿ ಆದ ಪ್ರಸಂಗಗಳೇ ಪ್ರದರ್ಶನ ಕಾಣುತ್ತವೆ. ಕೆಲವು ಪೌರಾಣಿಕ ಪ್ರಸಂಗಗಳ ಪಾತ್ರಗಳಿಗೆ ಒಬ್ಬ ಕಲಾವಿದ ಸೀಮಿತವಾಗಿ ಬಿಡುತ್ತಾನೆ. ಆ ಪಾತ್ರಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ತಿಳಿದುಕೊಂಡಿರುತ್ತಾನೆ. ಹೊಸ ಪ್ರಸಂಗ ಬಂದಾಗ ಸಿದ್ಧತೆಗಳು ಹೆಚ್ಚು ಬೇಕಾಗುತ್ತದೆ. ಬಯಲಾಟದ ಕಲಾವಿದರಾಗಿ ಈ ಬಗ್ಗೆ ನಿಮ್ಮ ಅಭಿಪ್ರಾಯ ಏನು? ಕಲಾವಿದರ ಅಧ್ಯಯನ ಹೇಗಿರಬೇಕು?***

**ಶೇ.ಶೆ:** ಈಗ ಮೇಳಕ್ಕೆ ಬರುವ ಹುಡುಗರು ಇತ್ತೀಚಿನ ದಿನಗಳಲ್ಲಿ ಆಟ ನೋಡಿಯೋ, ಇನ್ನೊಬ್ಬರಿಂದ ತಿಳಿದುಕೊಂಡು ಬರುವುದು ತುಂಬಾ ಕಡಿಮೆ. ಮೊಬೈಲ್ ನೋಡಿ ಪಾತ್ರದ ಬಗ್ಗೆ ತಿಳಿದುಕೊಳ್ಳುತ್ತಾರೆ. ಅದು ಹೆಚ್ಚಿನ ಸಂದರ್ಭ ಉಪಯೋಗಕ್ಕೆ ಬರುವುದಿಲ್ಲ. ಫೋನಿನಲ್ಲಿ ನೋಡಿ ಮಾಡುವ ಪಾತ್ರ ಪರಿಪೂರ್ಣ ಅಲ್ಲ. ಚೌಕಿ ಮನೆಯಲ್ಲಿ ಎದುರಿನ ವೇಷದವರ ಜೊತೆ ಕುಳಿತು ಮಾತನಾಡಬೇಕು. ನಮ್ಮ ಎದುರಿನ ವೇಷದವರಲ್ಲಿ ಅನುಭವ ತೆಗೆದುಕೊಂಡು ಹೋದರೆ ರಂಗದಲ್ಲಿ ನಿಭಾಯಿಸಲು ಸುಲಭ. ಸಂವಾದ ಮಾಡುವಾಗ ಹಿರಿಯ ಕಲಾವಿದರು ನಮ್ಮನ್ನು ಸುಧಾರಿಸಿಕೊಂಡು ಹೋಗುತ್ತಾರೆ. ಫೋನಿನಲ್ಲಿ ಒಂದು ಪಾತ್ರವನ್ನು ನೋಡಿದರೆ ಎದುರಿಗೆ ಯಾರೋ ಆಗಿರುತ್ತಾರೆ. ರಂಗಸ್ಥಳದಲ್ಲಿ ಎದುರಿರುವವರು ಅದೇ ಸಂಭಾಷಣೆಗೆ ಬರುತ್ತಾರೆ ಎಂಬುದು ಏನು ಗ್ಯಾರಂಟಿ? ಸಹ ಕಲಾವಿದರ ಜೊತೆಯೇ ಸಂಭಾಷಣೆ ಮಾಡಿಕೊಂಡು ಸಿದ್ದರಾಗಿ ವೇದಿಕೆಗೆ ಹೋಗುವುದು ಸರಿಯಾದ ಕ್ರಮ.

***ಪ್ರ: ಯುವ ಕಲಾವಿದರಿಗೆ ನಿಮ್ಮ ಕಿವಿಮಾತು***

**ಶೇ.ಶೆ:** ಯುವಕರು ಮೊಬೈಲಿನಿಂದಲೂ ವಿಷಯ ತಿಳಿದುಕೊಳ್ಳಲಿ ಹಾಗೆ ಹಿರಿಯ ಕಲಾವಿದರನ್ನು ಕೇಳಿ ರಂಗಕ್ಕೆ ಸಿದ್ಧರಾಗುವುದು ಅವಶ್ಯಕ. ಪುಸ್ತಕ ಹಿಡಿಯುವುದು ಉತ್ತಮ ಎಂದು ನನ್ನ ಅಭಿಪ್ರಾಯ

***ತಿರುಗಾಟದಲ್ಲಿ ಒಡನಾಡಿಗಳಾಗಿದ್ದ ಕಲಾವಿದರು***

**ಶೇ.ಶೆ:** ದಿ. ನೀಲಾವರ ಮಹಾಬಲ ಶೆಟ್ಟಿ, ದಿ. ಮೊಳವಳ್ಳಿ ಹಿರಿಯ ನಾಯಕರು, ದಿ. ಅನಂತ ಕುಲಾಲರು, ಐರಬೈಲ್ ಆನಂದ ಶೆಟ್ಟಿ, ಆಲೂರು ಸುರೇಂದ್ರ, ಗೋಳಿಕೆರೆ ಚಂದ್ರಗೌಡರು ನಾಗೂರು ಶ್ರೀನಿವಾಸ, ಉಮೇಶ್ ಸುವರ್ಣ ಭಾಗವತರು, ಸುಧಾಕರ್ ಕೊಟ್ಟಾರಿ ಮೊದಲಾದವರು

---

## ಕಾಲ್ಪನಿಕ ಪ್ರಸಂಗಗಳಿಗೆ ಪುರಸ್ಕಾರ

ನಾದ ನೂಪುರ ಯಕ್ಷೋತ್ಥಾನ ಟ್ರಸ್ಟ್ ವಂಡಾರು ಹಗಲು ಯಶೋದೆ ಕೇರ್ ಅಂಡ್ ಸರ್ವಿಸ್ ಮಂಗಳೂರು ಇವರ ಸಹಯೋಗದಲ್ಲಿ ಯಕ್ಷಗಾನ ಸಾಹಿತ್ಯಾಭಿರುಚಿಯನ್ನು ಪ್ರೋತ್ಸಾಹಿಸುವ ಸಲುವಾಗಿ ಶ್ರೀಮತಿ ಯಶೋದಾ ದೇವಿ ಸ್ಮರಣಾರ್ಥ ಸೃಜನಶೀಲ ಕಾಲ್ಪನಿಕ ಪ್ರಸಂಗಗಳಿಗೆ ***ಶ್ರೀಮತಿ ಯಶೋದಾ ದೇವಿ ಪ್ರಸಂಗ ಮಾಣಿಕ್ಯ ಪುರಸ್ಕಾರ*** ವನ್ನು ನೀವಿ ಗೌರವಿಸಲು ಮುಂದಾಗಿದೆ. ಆಸಕ್ತರು ಈ ಪ್ರಶಸ್ತಿಗೆ ತಮ್ಮ ಪ್ರಸಂಗ ಕೃತಿಗಳನ್ನು ಕಳುಹಿಸಿಕೊಡಬಹುದು.

**ಪ್ರಸಂಗ ಕಳುಹಿಸುವವರ ಗಮನಕ್ಕೆ**

- ಉತ್ತಮ ಸೃಜನಶೀಲ ಕಾಲ್ಪನಿಕ ಪ್ರಸಂಗಗಳಿಗೆ ಮಾತ್ರ ಅವಕಾಶ ಸಾಮಾಜಿಕ ಮೌಲ್ಯವುಳ್ಳ (ತುಳು/ಕನ್ನಡ) ಪ್ರಸಂಗವಾಗಿರಬೇಕು ಉದಯೋನ್ಮುಖ ಬರಹಗಾರರಿಗೆ ಆದ್ಯತೆ
- ಪ್ರಸಂಗದ ಕಥೆ ಹಾಗು ಪದ್ಯ ರಚನೆ ಒಬ್ಬರದೇ ಆಗಿರಬೇಕು
- ಛಂದೋಬದ್ಧ ಪ್ರಸಂಗ ಸಾಹಿತ್ಯವಿರಬೇಕು ರಂಗ ಪ್ರಯೋಗ ಕಂಡಿರಬೇಕು
- ಸಿನಿಮಾ ಶೈಲಿಯ ಹಾಡುಗಳು/ ರಂಗ ಸಭ್ಯತೆ ಮೀರಿದ ಹಾಸ್ಯ/ ಯಕ್ಷಗಾನೀಯವಲ್ಲದ ವೇಷ ಪಾತ್ರಗಳು ಇರುವಂತಿಲ್ಲ

***ಆಯ್ಕೆಯ ವಿಧಾನ:*** ಅನುಭವಿ ಪ್ರಸಂಗಕರ್ತರ ಸಮಿತಿ ಆಯ್ಕೆ ಪ್ರಕ್ರಿಯೆ ನಡೆಸುತ್ತದೆ

ನಿಮ್ಮ ಪ್ರಸಂಗ ಕಳುಹಿಸಬೇಕಾದ ಇ–ಮೇಲ್ ವಿಳಾಸ: **nadanoopuravandaru@gmail.com**

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ – 9482847978/8277560171